بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 09

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**03 ಮಾರ್ಚ್ 2022, 03 ಅಮಾನ್ 1401 ತಬ್‌ಲೀಗ್ ಹಿಜರಿ ಶಮ್‌ಸಿ, 29 ರಜಬ್ 1443 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَلَقَدِ اسْتُهْزِئَ بِرُسُلٍ مِّنْ قَبْلِكَ
فَحَاقَ بِالَّذِيْنَ سَخِرُوْا مِنْهُمْ مَّا
كَانُوْا بِهٖ يَسْتَهْزِءُوْنَ

**(ಅಲ್‌ಅನ್‌ಆಂ : 11)**

**ಅಂದರೆ: (ಎಲೈ ಪ್ರವಾದಿಯೇ,) ನಿನಗೆ ಮುಂಚೆ ಸಹ ಪ್ರವಾದಿಗಳು ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ. ಅದರ ಫಲವಾಗಿ, ಅವರು ಏನನ್ನು ಅಪಹಾಸ್ಯ ಮಾಡುತ್ತಿದ್ದರೋ ಅದು (ಆ ಶಿಕ್ಷೆ) ಅವರಲ್ಲಿ ಅಪಹಾಸ್ಯ ಮಾಡಿದವರನ್ನೇ ಸುತ್ತುವರಿಯಿತು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಫಲಾ ಜುನಾಹ ಅಲೈಹಿ ಅಂಯತವ್ವಫ ಬಿಹಿಮಾ" ಕುರಿತು ಹಝ್ರತ್ ಆಯಿಶಾ(ರ) ರವರ ಉಲ್ಲೇಖ

(1643) ಅವರು ಹೇಳಿದರು. ನಾನು ಹಝ್‌ರತ್ ಆಯಿಶಾ(ರ) ರೊಡನೆ ಕೇಳಿದೆನು. ಅಲ್ಲಾಹನು ಹೇಳುವನು. ಸಫಾ ಮತ್ತು ಮರ್ವಾ ಅಲ್ಲಾಹನ ಪವಿತ್ರ ಸ್ಥಳವಾಗಿದೆ ಎಂದು, ಅಂದಹಾಗೆ ಯಾರು ಬೈತುಲ್ಲಾಹ್‌ದ ಹಜ್ಜ್ ಮಾಡಿರುವವನು ಅಥವಾ ಉಮ್ರ: ಮಾಡಿರುವವನು ಅವನ ಮೇಲೆ ಯಾವ ಪಾಪವು ಇಲ್ಲ, ಈ ಎರಡರ ತವಾಫ್ ಮಾಡಲಿ. ಅಲ್ಲಾಹನಾಣೇ! (ಇದರಿಂದ ತಿಳಿದುಬರುವುದೇನೆಂದರೆ) ಸಫಾ ಮತ್ತು ಮರ್ವ ತವಾಫ್ ಮಾಡಿದವರ ಮೇಲೆ ಯಾವ ಪಾಪವು ಇಲ್ಲ. ಅವರು ಹೇಳಿದರು. ನನ್ನ ಸಹೋದರ ಸಂಬಂಧಿಯೇ! ಎಷ್ಟೊಂದು ಕೆಟ್ಟ ಮಾತನ್ನು ಆಡಿರುವೆ. ನೀನು ಹೇಳಿದಂತಹ ವಚನ ನೀನು ವ್ಯಾಖ್ಯಾನಿಸಿದಂತೆ ಆಗುತ್ತಿದ್ದರೆ, ಹೀಗೆ ಆಗಬಹುದಿತ್ತು. **"ಲಾ ಜುನಾಹ ಅಲೈಹಿ ಅಲ್ಲಾ ಯತವ್ವಫ ಬಿಹಿಮಾ"** ಅಂದರೆ ಅವರ ಮೇಲೆ ಯಾವ ಪಾಪವು ಇಲ್ಲ. ಅವರು ಈ ಎರಡರ ತವಾಫ್ ಮಾಡಿದರೆ, ಆದರೆ ಈ ವಚನ ಅನ್ಸಾರರ ಪೈಕಿ ಅವತರಿಸಿತ್ತು. ಅವರು ಇಸ್ಲಾಂ ಸ್ವೀಕರಿಸುವ ಮುನ್ನ "ಮನಾತ್" ವಿಗ್ರಹಗೋಸ್ಕರ ಎಹರಾಮ್ ಕಟ್ಟುತ್ತಿದ್ದರು. ಅವನ್ನು ಪೂಜಿಸುತ್ತಿದ್ದರು. ಅಂದಹಾಗೆ ಹಜ್ಜ್ ಅಥವಾ ಉಮ್ರ:ಕ್ಕಾಗಿ ಬಹರಾಮ್ ಕಟ್ಟುತ್ತಿದ್ದರೆ ಸಫಾ ಮತ್ತು ಮರ್ವದಲ್ಲಿ ತವಾಫ್ ಮಾಡುವುದು ಪಾಪ ಎಂದು ಭಾವಿಸುತ್ತಿದ್ದರು. ಅವರು ಇಸ್ಲಾಂ ಧರ್ಮದ ಸ್ವೀಕಾರ ಮಾಡಿದ ಮೇಲೆ ರಸೂಲುಲ್ಲಾಹ್(ಸ) ರೊಡನೆ ಕೇಳಿದರು. ಓ ನಬಿವರ್ಯರೇ! ನಾವು ಸಫಾ ಮತ್ತು ಮರ್ವ ತವಾಫ್ ಮಾಡುವುದನ್ನು ಪಾಪ ಎಂದು ಭಾವಿಸುತ್ತಿದ್ದೆವು. ಆಗ ಅಲ್ಲಾಹನು ಈ ದಿವ್ಯವಾಣಿ ಅವತರಿಸಿದನು. **"ಇನ್ನಸ್ಸಫಾ ವಲ್ ಮರ್ವ ನ ಮಿನ್ ಶಲಿಇರಿಲ್ಲಾಹಿ"** ಹಝ್‌ರತ್ ಆಯಿಶಾ(ರ) ಹೇಳುತ್ತಿದ್ದರು. ರಸೂಲುಲ್ಲಾಹ್(ಸ) ಈ ಎರಡರ ಸುತ್ತು ತವಾಫ್ ಮಾಡುವುದನ್ನು ಜಾರಿಗೊಳಿಸಿದ್ದಾರೆ. ಆದುದರಿಂದ ಯಾರಿಗೂ ಸಹ ಬಿಡುವ ಅವಶ್ಯಕತೆ ಇಲ್ಲ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಲ್ ಹಜ್ಜ್, ಮುದ್ರಣ ಖಾದಿಯಾನ್)**

## ಈ ಸಮಯ ಇಸ್ಲಾಮಿನ ಮೇಲೆ ಬಂದ ಆಪತ್ತುಗಳನ್ನು ದೂರ ಮಾಡುವ ಕಾರ್ಯದಲ್ಲಿ ಓರ್ವ ಮುಸ್ಲಿಮನಾದ ಕಾರಣದಿಂದ ಪಾಲ್ಗೊಳ್ಳುವುದು ಅನಿವಾರ್ಯವಾಗಿದೆ.

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಹೇಳುತ್ತಾರೆ: ಇನ್ನು ನಮ್ಮ ವಿರೋಧಿಗಳಲ್ಲಿ ಹಲವು ಜನರು ಹೀಗಿದ್ದಾರೆ. ಅವರು ನಮ್ಮ ಜಮಾಅತಿಗೆ ಸೇರುವುದು ವಿಧಿಯಲ್ಲಿ ಬರೆಯಲ್ಪಟ್ಟಿದೆ. ಅವರು ವಿರೋಧ ಮಾಡುವುದನ್ನು ನೋಡಿ ದೇವದೂತರು ನಗುತ್ತಾರೆ. ನೀವು ಅಂತಿಮವಾಗಿ ಅದೇ ಜನರಲ್ಲಿ ಸೇರುವಿರಿ ಎಂದು. ಅವರು ನಮ್ಮ ಗೌಪ್ಯ ರೀತಿಯ ಜಮಾಅತ್ ಆಗಿದ್ದಾರೆ. ಒಂದು ದಿನ ಅವರು ನಮ್ಮ ಜೊತೆ ಸೇರುವರು.

**ಕಾಲಘಟ್ಟದ ಮಹತ್ತರ ಆರಾಧನೆ**

"ಈ ಕಾಲಾವಧಿಯಲ್ಲಿ ಇಸ್ಲಾಮಿನ ಮೇಲೆ ಬಂದ ಆಪತ್ತುಗಳನ್ನು ದೂರ ಮಾಡುವ ಕಾರ್ಯದಲ್ಲಿ ಓರ್ವ ಮುಸ್ಲಿಮನಾದ ಕಾರಣದಿಂದ ಪಾಲ್ಗೊಳ್ಳುವುದು ಅನಿವಾರ್ಯವಾಗಿದೆ. ಈ ಗೊಂದಲವನ್ನು ದೂರೀಕರಿಸುವುದರಲ್ಲಿ ಪಾಲ್ಗೊಳ್ಳುವುದೇ ಈ ಕಾಲಘಟ್ಟದ ಮಹತ್ತರ ಆರಾಧನೆಯಾಗಿರುತ್ತದೆ. ಈ ಸಮಯ ಹರಡಿಕೊಂಡಂತಹ ಪಾಪಗಳನ್ನು ಮತ್ತು ಅಪಹಾಸ್ಯಗಳನ್ನು ತನ್ನ ಭಾಷಣಗಳ ಮೂಲಕ, ಜ್ಞಾನಗಳ ಮೂಲಕ ಮತ್ತು ಎಲ್ಲಾ ಶಕ್ತಿಗಳಿಂದಲು ಲೋಕದಿಂದ ದುರ ಮಾಡಲು ಮನ: ಪೂರ್ವಕವಾದ ಪ್ರಯತ್ನಗಳನ್ನು ಕೈಗೊಳ್ಳಬೇಕಾಗಿದೆ. ಇಹಲೋಕದಲ್ಲಿಯೇ ಐಶ್ವರ್ಯದ ಸ್ವಾದ ಪಡೆದರೆ ಏನು ಪ್ರಯೋಜನ, ಇಹಲೋಕದಲ್ಲಿ ಪುಣ್ಯ ಪಡೆದರೆ ಏನು ಪಡೆದಂತೆ? ಪರಲೋಕದ ಪುಣ್ಯವನ್ನು ಗಳಿಸಿಕೊಳ್ಳಿ. ಅದು ಅಪರಿಮಿತವಾಗಿವೆ. ಏಕದೇವತ್ವಕ್ಕಾಗಿ ಪ್ರತಿಯೊಬ್ಬರು, ಸ್ವಯಂ ಅಲ್ಲಾಹನಿಗೆ ತನ್ನ ಏಕತ್ವದ ಬಗ್ಗೆ ಇದ್ದ ಹೆಮ್ಮೆಯ ರೀತಿಯ ಉತ್ಸಾಹವಿರಬೇಕಾಗಿದೆ. ಯೋಚಿಸಿ ನೋಡಿ ಲೋಕದಲ್ಲಿ ಈ ರೀತಿಯ ಪೀಡಿತರು ಎಲ್ಲಿದ್ದಾರೆ. ನಮ್ಮ ನಬಿ(ಸ) ರವರಂತಹ ಪೀಡನೆಗೆ ಒಳಗಾದವರು ಯಾರಿದ್ದಾರೆ. ಯಾವ ಯಾವ ಅಶ್ಲೀಲ ಭಾಷೆಗಳನ್ನು ಅವರ ವಿರುದ್ಧ ಬಳಸಲಾಗಿಲ್ಲ? ಯಾವ ಆರೋಪವನ್ನು ಅವರ ವಿರುದ್ಧ ಮಾಡಲಿಲ್ಲ? ಇದು ಮುಸಲ್ಮಾನರು ಮೌನವಹಿಸುವಂತಹ ಕಾಲವೆ? ಈ ಸಮಯದಲ್ಲೂ ಸಹ ಎದ್ದೇಳದಿದ್ದರೆ, ಮತ್ತು ಸತ್ಯದ ಪರವಾಗಿ ಸಾಕ್ಷ್ಯ ವಹಿಸಲಿಲ್ಲವಾದರೆ, ಅವಿಶ್ವಾಸಿಗಳು ನಮ್ಮ ನಬಿ(ಸ) ರವರ ಮೇಲೆ ಹೊರಿಸುತ್ತಿರುವ ಆರೋಪ. ಜನರನ್ನು ದಾರಿ ತಪ್ಪಿಸುತ್ತಿರುವುದನ್ನು ಸರಿ ಎನ್ನಬೇಕಾಗುತ್ತದೆ. ನೆನಪಿಡಿರಿ. ನಿಸ್ಸಂಶಯವಾಗಿಯೂ ಅವರು ಅಂತ್ಯ ದಿನದಂದು ಕೇಳಲ್ಪಡುವರು. ಏನೆಲ್ಲ ನಿಮಗೆ ಜ್ಞಾನವಿದೆಯೋ, ಅರ್ಹತೆಗಳಿವೆಯೋ ಅವುಗಳನ್ನು ಈ ಮಾರ್ಗದಲ್ಲಿ ಬಳಕೆ ಮಾಡಿ ಜನರನ್ನು ಆಪತ್ತಿನಿಂದ ರಕ್ಷಿಸಿ. ಹದೀಸಿನಿಂದ ಸಾಬೀತಾಗಿರುತ್ತದೆ. ನೀವು ದಜ್ಜಾಲನನ್ನು ಹತ್ಯೆ ಮಾಡದಿದ್ದರೂ ಅದು ಹತನಾಗುವುದು ಶತಸಿದ್ಧ. ಸಮಯಕ್ಕೆ ಸರಿಯಾಗಿ ಎಚ್ಚೆತ್ತುಕೊಳ್ಳುವವರೇ ಜಾಣರು" ಎಂಬ ಮಾತು ಪ್ರಸಿದ್ಧವಿದೆ. ಹದಿಮೂರನೇ ಶತಮಾನದಿಂದಲೇ ಈ ಆಪತ್ತುಗಳು ಪ್ರಾರಂಭವಾದವು. ಇದೀಗ ಅವು ಅಂತ್ಯಗೊಳ್ಳುವ ಸಮಯ ಸಮೀಪವಾಗಿದೆ. ಕಾರಣ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಎಷ್ಟು ಸಾಧ್ಯವಿದೆಯೋ ಅಷ್ಟು ಪ್ರಯತ್ನ ಮಾಡಬೇಕು ಮತ್ತು ಜನರಿಗೆ ಪ್ರಕಾಶದ ಮಾರ್ಗ ತೋರಿಸಬೇಕು.

(ಮಲ್ಫೂಝಾತ್ ಸಂಪುಟ-1, ಪುಟ 355-356, 357 ಮುದ್ರಣ 2018 ಖಾದಿಯಾನ್).

**"ವ ಇನ್‌ತವುದ್ದು ನಿಮತಲ್ಲಾಹಿ ಲಾ ತುಹ್‌ಸುಹಾ, ಇನ್ನಲ್ಲಾಹ ಲಗಫೂರುರ್ ರಹೀಮ್"**
**ನೀವು ಅಲ್ಲಾಹನ ಅನುಗ್ರಹಗಳನ್ನು ಎಣಿಸಬಯಸಿದರು. ಎಣಿಸಲಾರಿರಿ ಮತ್ತು ಯಾವ ರೀತಿ ಈ ಲೌಕಿಕ ಅನುಗ್ರಹಗಳನ್ನು ದಯಪಾಲಿಸಿದ್ದಾನೋ ಅದೇ ರೀತಿ ಆಧ್ಯಾತ್ಮಿಕ ಅನುಗ್ರಹಗಳು ನೀಡಲು ಏಕೆ ಸಾಧ್ಯವಿಲ್ಲ? ಅವನು ಈ ಮಿಥ್ಯ ದೇವರುಗಳನ್ನು ಅವು ಯಾವ ಶಕ್ತಿಯೂ**

ಸಯ್ಯಿದ್‌ನಾ ಹಝ್‌ರತ್ ಮಸೀಹ್ ಮೌಊದ್(ಅ) ಸೂರ: ಅನ್ನಹ್ಲ್ ವಚನ 18, 19 **ಅಫಮೈಯಖ್‌ಲುಖು ಕಮನ್ ಲಾ ಯಖ್‌ಲುಖು, ಅಫಲಾ ತಝಕ್ಕರೂನ್. ವಇನ್ ತುದ್ದೂ ನಿಅ್‌ಮತಲ್ಲಾಹಿ ಲಾತುಹ್‌ಸೂಹಾ, ಇನ್ನಲ್ಲಾಹ ಲಗಫೂರುರ್ರಹೀಮ್** ರ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ. ಸೃಷ್ಟಿಸುವವನು ಸೃಷ್ಟಿ ಪದ ಏನು ಸಮಾನರಾಗುವುದು ಹೇಗೆ? ಇದರ ಮೇಲೆ ಕೆಲವರು ಹೀಗೆ ಆಕ್ಷೇಪಿಸುತ್ತಾರೆ. ಸೃಷ್ಟಿಸಿದವನು, ಸೃಷ್ಟಿಸುವವನು ಸಮಾನರಾಗುವುದು ಹೇಗೆ? ಆ ವಾಕ್ಯ ಹೀಗೆ ಆಗಬೇಕಾಗಿತು (ಕಷಾಫ್) ಏಕೆಂದರೆ ಸ್ಪರ್ಧೆಯ ಸಮಯದಲ್ಲಿ ಅಲ್ಪದವನನ್ನು ಮಹಾನನ ಮುಂದೆ ಇರಿಸಲಾಗುತ್ತದೆ. ಮಹಾನನನ್ನು ಅಲ್ಪದವನ ಮುಂದೆ

*(ಪುಟ ಸಂಖ್ಯೆ-09 ರಲ್ಲಿ ಮುಂದುವರಿಸಲಾಗಿದೆ)*

لَآ اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرُّ السُّمُوْمِ عَدَاوَۃُ الصُّلَحَاءِ

**ಇಂಜೀಲಿನ ವಚನಗಳಿಂದ ಯೇಸುವಿನ ದೇವತ್ವದ ಸಾಕ್ಷ್ಯ ಖಂಡಿತವಾಗಿಯೂ ಸಾಬೀತಾಗುವುದಿಲ್ಲ. ಇಂತಹ ವಚನಗಳಿಂದ ದೇವನಾಗುವುದು ಸಾಬೀತಾಗುವುದಿದ್ದರೆ ನನ್ನ ದಿವ್ಯವಾಣಿಗಳು, ಯೇಸುವಿನ ದಿವ್ಯವಾಣಿಗಳಿಂತ ಎಷ್ಟೋ ಪಟ್ಟು ಅಧಿಕ ನನ್ನ ದೇವರಾಗುವಿಕೆಯು ಸಾಬೀತಾಗುತ್ತದೆ. ಫಾದರಿ ಸಾಹೇಬರುಗಳು ಅಥವಾ ಯಾವುದೇ ಸಮುದಾಯದ ಮೂರು ನ್ಯಾಯವಂತರು ಪ್ರಮಾಣ ಮಾಡಿ ಈ ವಿವರ ನೀಡಲಿ. ಯೇಸುವಿನ ದೇವನಾಗುವ ಸಾಕ್ಷ್ಯಗಳು ಕೂಲಂಕುಶವಾಗಿ ಸಾಬೀತುಪಡಿಸುವಂತಿದ್ದರೆ ನಾನು ಅವರಿಗೆ ದಂಡರೂಪದಲ್ಲಿ ಸಾವಿರ ರೂಪಾಯಿಗಳನ್ನು ನೀಡುವೆನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ–ಕಿತಾಬುಲ್ ಬರಿಯ್ಯ ರೂಹಾನಿ ಖಝಾಯಿನ್ ಸಂಪುಟ 13 ರಿಂದ ಪ್ರಸ್ತುತಪಡಿಸುತ್ತಿದ್ದೆವೆ. ಬಹುದೇವರಾಧನೆಯು ಎಲ್ಲದಕ್ಕಿಂತ ಮಿಗಿಲಾದ ಪಾಪವಾಗಿದೆ ಎಂದು ಪವಿತ್ರ ಖುರ್‌ಆನ್‌ನ ವಾದವಾಗಿದೆ. ಗಮನವಹಿಸಿ ಯೋಚಿಸಿದರೆ ಬಹುದೇವಾರಾಧನೆ ಕೇವಲ ಬಹು ದೊಡ್ಡ ಪಾಪ ಮಾತ್ರವಲ್ಲ. ಬದಲು ಅದೊಂದು ದೊಡ್ಡ ದುರಭಿಮಾನ ಹಾಗೂ ನಿರ್ಲಜ್ಜತೆಯಾಗಿದೆ. ಮನುಷ್ಯನ ಅಂಗಾಂಗ ಮತ್ತು ಅವನ ಅಸ್ತಿತ್ವದ ಅಣು ಅಣು ಸಹ ಆ ಸೃಷ್ಟಿಕರ್ತನ ಚಿರಋಣಿಯಾಗಿದೆ. ಅವನ ಉಪಕಾರವನ್ನೇ ನಿರಾಕರಿಸಿದರೆ ಮತ್ತು ಅವನ ಉಪಕಾರವನ್ನು ಬೇರೊಬ್ಬನ ಹೆಸರಿಗೆ ವರ್ಗಾಯಿಸಿದರೆ, ಅದು ಅವನ ಮೇಲೆ ದ್ರೋಹ ಬಗೆದಂತೆಯೇ ಸರಿ.

ಈಸಾಯಿ ಮಹನಿಯರು ಹಝ್ರತ್ ಈಸಾ(ಅ) ರನ್ನು ದೇವನನ್ನಾಗಿ ಮಾಡಿ ಈ ರೀತಿಯ ದ್ರೋಹಕ್ಕೆ ತುತ್ತಾಗಿದ್ದಾರೆ. ಓರ್ವ ಸಂದೇಶವಾಹಕನಿಗೆ ಇದಕ್ಕಿಂತ ದುಃಖದ ಮಾತು ಏನಿರಬಹುದು. ಅವರನ್ನು ತನ್ನ ಕಣ್ಣೆದುರೆ ದುರ್ಬಲ ನಿಶ್ಯಕ್ತ ಮನುಷ್ಯನೊಬ್ಬನನ್ನು ದೇವನನ್ನಾಗಿ ಮಾಡಲಾಗಿದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಹೃದಯವು ಇಂತಹ ವಿಶ್ವಾಸದಿಂದ ರಕ್ತ ಕಾರುವಂತಾಗುತ್ತಿತ್ತು. ಅವರು ಈ ವಿಶ್ವಾಸದ ವಿರುದ್ಧ ಎಷ್ಟೊಂದು ಅಭಿಮಾನ ತೋರಿಸಿದ್ದಾರೆಂದರೆ ಅದನ್ನು ರದ್ದುಪಡಿಸಲಿಕ್ಕೆ ಸಾಕ್ಷ್ಯಗಳ ರಾಶಿಯೇ ಸಂಗ್ರಹಿಸಿದರು. ದೊಡ್ಡ ದೊಡ್ಡ ಬಹುಮಾನಗಳ ಪಂಥಾಹ್ವಾನ ಅವರು ಈ ಪಾದರಿ ಸಾಹೇಬರುಗಳಿಗೆ ನೀಡಿದರು. ಅವರು ಇಚ್ಚೆಸಿದಂತೆ ನಿರ್ಣಯಿಸಿಕೊಳ್ಳಲಿ, ಇಸ್ಲಾಮ್ ಧರ್ಮ ದೇವನಿಂದ ಬಂದ ಧರ್ಮವಾಗಿದೆಯೇ ಅಥವಾ ಕ್ರೈಸ್ತ ಧರ್ಮವೆ? ಈ ಬಗ್ಗೆ ಅವರು ತನ್ನ ಗ್ರಂಥ “ಅಂಜಾಮೆ ಆಥಮ್‌ನಲ್ಲಿ ಪಂಥ್ವಾಹಾನ ನೀಡಿದರು. ಮುಬಾಹಲ ಮೂಲಕ ನಿರ್ಣಯಿಸಿ ಕೊಳ್ಳೋಣ ಇಸ್ಲಾಮ್ ಮತ್ತು ಕ್ರೈಸ್ತ ಧರ್ಮದಲ್ಲಿ ಯಾವ ಧರ್ಮ ಸತ್ಯವಾಗಿದೆ ಮತ್ತು ಸತ್ಪಥದಲ್ಲಿದೆ. ಅದಕ್ಕಾಗಿ ಅವರು 10 ಸಾವಿರ ರೂಪಾಯಿಗಳ ಬಹುಮಾನವನ್ನು ‘ಸಿರಾಜ್ ಮುನೀರ್’ ನಲ್ಲಿ ಪ್ರಕಟಿಸಿದರು. ಅದೇ ರೀತಿ ಯಾರಾದರೂ ಯೇಸುವಿನ ಪವಾಡಗಳು ನನ್ನ ಪವಾಡಗಳಿಗಿಂತ ಮಿಗಿಲಾಗಿದ್ದವು ಎಂದು ಸಾಬೀತುಪಡಿಸಿದರೆ ಅವರಿಗೆ ನಾನು ಒಂದು ಸಾವಿರ ರೂಪಾಯಿ ಬಹುಮಾನ ನೀಡುವೆನು ಎಂದು ಪಂಥಾಹ್ವಾನ ನೀಡಿದರು. ಯಾರಾದರೂ ಮಸೀಹರ ದಿವ್ಯವಾಣಿಗಳು ನನ್ನ ದಿವ್ಯವಾಣಿಗಳಿಗಿಂತಲೂ ಹೆಚ್ಚಾಗಿದ್ದವು ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ನೀಡುವೆವು ಎಂದು ‘ಕಿತಾಬುಲ್ ಬರಿಯಾ’ ದಲ್ಲಿ ಅವರು ಪಂಥಾಹ್ವಾನ ನೀಡಿದರು. ಯಾರಾದರೂ ಮಸೀಹರ ಭವಿಷ್ಯವಾಣಿಗಳು ನನ್ನ ಭವಿಷ್ಯವಾಣಿಗಳಿಂದಲೂ ಹೆಚ್ಚು ಪಾರದರ್ಶಕವಾಗಿದ್ದವು ಎಂದು ಸಾಬೀತುಪಡಿಸಿದರೆ ಅವರಿಗೆ ಒಂದು ಸಾವಿರ ರೂಪಾಯಿ ಬಹುಮಾನ ನೀಡುವೆನು ಎಂದು ಗ್ರಂಥ ‘ತದ್ಕಿರತುಶ್ಯಹಾದತೈನ್’ ನಲ್ಲಿ ಪಂಥಾಹ್ವಾನ ನೀಡಿದರು. ಮುಹಮ್ಮದಿ ಮಸೀಹರ ಸ್ಥಾನ ಮೂಸಾರ ಮಸೀಹರಿಗಿಂತ ಎಷ್ಟೋ ಪಾಲು ಹೆಚ್ಚಾಗಿದ್ದವು. ಅವರು ದೇವರಾಗಲಿಲ್ಲ ಮತ್ತು ಸ್ವಯಂ ಮುಹಮ್ಮದ್ ಮುಸ್ತಫ(ಸ) ಪ್ರವಾದಿಗಳಲ್ಲಿ ಸರ್ವಶ್ರೇಷ್ಠರು ಅವರು ದೇವರಾಗಲಿಲ್ಲ ಎಂದ ಮೇಲೆ ಹಝ್ರತ್ ಈಸಾ ಹೇಗೆ ತಾನೇ ದೇವರಾಗಲು ಸಾಧ್ಯ?

ಇಂದಿನ ಬಹುಮಾನದ ಪಂಥಾಹ್ವಾನ ನಾವು ಕಿತಾಬುಲ್ ಬರಿಯಾನಿಂದ ಪ್ರಸ್ತುತಪಡಿಸುತ್ತಿದ್ದೇವೆ. ಕ್ರೈಸ್ತ ಜನರು ಹಝ್ರತ್ ಈಸಾ(ಅ) ರವರನ್ನು ಯಾವ ವಚನಗಳ ಮೂಲಕ ಅವರು ದೇವರಾಗುವುದನ್ನು ಸಾಬೀತುಪಡಿಸುತ್ತಿದ್ದಾರೆ. ಅಂತಹ ವಚನಗಳು ಇಂಜೀಲಿನಲ್ಲಿ ಇವರ ಪ್ರವಾದಿಗಳ ಪ್ರವಾದಿಯೂ ಕಾಣಬಹುದಾಗಿದೆ. ಹೀಗಿರುವಾಗ ಅವರೆಲ್ಲರೂ ಸಹ ದೇವರಾಗಬಹುದಿತ್ತು. ಇದರ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಉದಾಹರಣೆ ಮುಂದಿಟ್ಟರು. ನನ್ನ ದಿವ್ಯವಾಣಿಗಳು ಮಸೀಹನ ದಿವ್ಯವಾಣಿಗಳಿಂದಲೂ ಎಷ್ಟೋ ಪಟ್ಟು ಹೆಚ್ಚಾಗಿದ್ದವು. ಹೀಗೆ ನನ್ನ ದಿವ್ಯವಾಣಿಗಳಿಂದ ನನ್ನ ದೇವರಾಗುವುದು ಸಾಬೀತಾಗುವುದಿಲ್ಲ. ಮತ್ತು ನಾನು ದೇವನಲ್ಲ ಎಂದಾದರೆ ಮಸೀಹನು ಹೇಗೆ ದೇವರಾಗಲು ಸಾಧ್ಯ? ಅವರು ಕೆಲ ದಿವ್ಯವಾಣಿಗಳನ್ನು ಮಾದರಿ ರೂಪವಾಗಿ ಪ್ರಸ್ತುತಪಡಿಸಿದರು ಮತ್ತು ಒಂದು ಮಹೋನ್ನತವಾದ ದಿವ್ಯ ಸ್ವಪ್ನದ ವಿವರ ನೀಡಿದರು. ಅದರಲ್ಲಿ ಅವರ ಮತ್ತು ದೇವನ ಅಸ್ತಿತ್ವ ಒಂದೇ ಆಗಿಬಿಟ್ಟಿತ್ತು. ಅಂತಹ ಮಹೋನ್ನತವಾದ ದಿವ್ಯವಾಣಿಗಳಿಂದ ಮತ್ತು ದಿವ್ಯ ಸ್ವಪ್ನದ ನಂತರವು ಅವರು ದೇವರಾಗುವ ದಾವೆ ಹೂಡಲಿಲ್ಲ ಎಂದ ಮೇಲೆ ಹಝುರತ್ ಈಸಾ (ಅ) ರವರ ದೇವರಾಗುವ ದಾವೆ ಅನ್ಯಾಯವಾದುದು ಮತ್ತು ಅತ್ಯಂತ ಘೋರವಾದ ದೌರ್ಜನ್ಯವಾಗಿದೆ. ಈಗ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಸುವರ್ಣ ಅಧ್ಯಾಪನೆಗಳು ಮತ್ತು ಅವರ ವೈಭವಪೂರ್ಣ ಪಂಥಾಹ್ವಾನ ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೇವೆ.

### ಹಝ್ರತ್ ಮಸೀಹರು ನಾನು ದೇವನಾಗಿದ್ದೇನೆ ಎಂದು ಯಾವತ್ತೂ ಹೇಳಲಿಲ್ಲ ಬದಲಿಗೆ ನಾನು ಮನುಷ್ಯನಾಗಿದ್ದೇನೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದು ಸಹ ನೆನಪಿಡಬೇಕಾಗಿದೆ. ಈ ಮಾತುಗಳು ಹಝ್ರತ್ ಮಸೀಹರ ಶಿಕ್ಷಣದಲ್ಲಿರಲಿಲ್ಲ. ಅವರ ಶಿಕ್ಷಣ ತೌರಾತಿನಲ್ಲಿ ಇದ್ದದ್ದಕ್ಕಿಂತ ಯಾವುದೇ ರೀತಿಯಲ್ಲಿ ಹೆಚ್ಚಾಗಿರಲಿಲ್ಲ. ಅವರು ಸುಸ್ಪಷ್ಟವಾಗಿ ಹೇಳಿದ್ದರು. ನಾನು ಮನುಷ್ಯನಾಗಿದ್ದೇನೆ. ಹೌದು ಯಾವ ರೀತಿಯಲ್ಲಿ ದೇವನ ಪ್ರೀತಿಗೆ ಪಾತ್ರರಾದವರು, ಗೌರವಕ್ಕೆ ಪಾತ್ರರಾಗುವರು ಮತ್ತು ಅವನ ಸಾನಿಧ್ಯ ಹಾಗೂ ಅಲ್ಲಾಹನ ಪ್ರೀತಿಯಿಂದ ಬಿರುದು ಪಡೆದವರು ಅಥವಾ ಅಲ್ಲಾಹನ ಪ್ರೀತಿಯಲ್ಲಿ ಮುಳುಗಿ ಪ್ರೀತಿ ಮತ್ತು ಸಾನಿಧ್ಯದಿಂದ ಅವರ ರೂಪಧಾರಣೆ ಮಾಡುತ್ತಾರೆ. ಅವರ ಸ್ಥಿತಿಯು ಹಾಗೆಯೇ ಆಗಿತ್ತು. ಅದರಲ್ಲಿ ಯಾವ ಸಂಶಯವಿದೆ. ಒಬ್ಬ ಮನುಷ್ಯನು ಪ್ರೀತಿಯುಳ್ಳವನಾದರೆ ಅಥವಾ ಅಲ್ಲಾಹನೊಂದಿಗೆ ಅವನ ಪ್ರೀತಿ ಉಚ್ಛಮಟ್ಟಕ್ಕೆ ತಲುಪಿದರೆ, ಪ್ರೀತಿಸುವವನಿಗೆ ತನ್ನ ಆತ್ಮ ತನ್ನ ಪ್ರಿಯಕರನ ಆತ್ಮದಲ್ಲಿ ಲೀನವಾದಂತೆ ಕಾಣುತ್ತದೆ. ಸಂಪೂರ್ಣವಾಗಿ ಅವನಲ್ಲಿ ಶರಣು ಹೊಂದಿದಾಗ ತನ್ನನ್ನು ತನ್ನ ಪ್ರಿಯಕರನನ್ನು ಏಕ ಅಸ್ತಿತ್ವದಂತೆ ಕಾಣುತ್ತಾನೆ. (ಕಿತಾಬುಲ್ ಬರಿಯಾ, ರೂಹಾನಿ ಖಝಾಈನ್, ಸಂಪುಟ–13, ಪುಟ–100)

### ನಿನ್ನೊಡನೆ ಬೈಅತ್ ಮಾಡುವುದು ನನ್ನೊಡನೆ ಬೈಅತ್ ಮಾಡಿದಂತೆ ನಿನ್ನ ಕೈ ನನ್ನ ಕೈ ಆಗಿದೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಮಸೀಹ್(ಅ) ರವರ ವಚನಗಳು ಮತ್ತು ದಿವ್ಯವಾಣಿಗಳ ಎದುರಿನಲ್ಲಿ ತನ್ನ ದಿವ್ಯವಾಣಿಗಳ ನಮೂನೆಗಳನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ಈ ಕೆಳಗೆ ನಮೂದಿಸಲಾಗಿದೆ. ಅಲ್ಲಾಹನು ಹೇಳಿದನು:

“ನೀನು ನನ್ನಿಂದ ಮತ್ತು ನಾನು ನಿನ್ನಿಂದಾಗಿದ್ದೇನೆ. ಭೂಮ್ಯಾಕಾಶವು ನನ್ನ ಜೊತೆಯಲ್ಲಿದ್ದಂತೆ ನಿನ್ನ ಜೊತೆಯಲ್ಲಿವೆ....., ನೀನು ನನ್ನೊಡನೆ ಹೇಗಿರುವೆ ಎಂದರೆ, ನನ್ನ ಏಕತ್ವ ಮತ್ತು ನೀನು ನನ್ನಿಂದ ಯಾವ ಸ್ಥಾನದಲ್ಲಿರುವೆ ಎಂದರೆ ಅದು ಯಾವ ಸೃಷ್ಟಿಯೂ ತಿಳಿದಿಲ್ಲ. ಅಲ್ಲಾಹನು ಆಕಾಶದಿಂದ ನಿನ್ನನ್ನು ಪ್ರಶಂಸಿಸುವನು, ನೀನು ಅವನಿಂದ ಆಗಮಿಸಿದೆ ಮತ್ತು ಅವನು ಎಲ್ಲಾ ಲೋಕದಿಂದ ನಿನ್ನನ್ನು ಆರಿಸಿಕೊಂಡನು. ನೀನು ನನ್ನ ಆಸ್ಥಾನದಲ್ಲಿ ಪರಿಶುದ್ಧನು. ನಾನು ನನಗಾಗಿ ನಿನ್ನನ್ನು ಮೆಚ್ಚಿಕೊಂಡೆನು. ನೀನು ಲೋಕದ ಪ್ರಕಾಶ ಆಗಿರುವೆ. ನಿನ್ನ ವೈಭವ ಅದ್ಭುತಕರವಾಗಿದೆ. ನಾನು ನಿನ್ನನ್ನು ನನ್ನೆಡೆ ಎತ್ತಿಕೊಳ್ಳುವೆನು. ನಿನ್ನ ಸಮುದಾಯವನ್ನು ಅಂತ್ಯ ದಿನದವರೆಗೆ ವಿಜಯಿಯಾಗಿಸುವೆನು. ನೀನು ಅನುಗ್ರಹಿತನು. ಅಲ್ಲಾಹನು ನಿನ್ನ ಸಂತಾನ ವೃದ್ಧಿಸಿದನು. ನೀನು ಅಲ್ಲಾಹನ ಗೌರವ ಆಗಿರುವೆ. ಹಾಗೆ ಅವನು ನಿನ್ನನ್ನು ವರ್ಜಿಸಲಿಲ್ಲ. ಸೈನ್ಯದೊಂದಿಗೆ ನಿನ್ನ ಬಳಿ ಬರುವನು. ನನ್ನಿಂದ ಲೂಟಿ ಮಾಡಿದ ಸಂಪತ್ತು ನಿನಗೆ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಪ್ರವಾದಿ(ಸ) ಹೇಳಿದರು: ನಾವು ಸತ್ಯನಿಷೇಧಿಗಳ ಪಂಥಾಹ್ವಾನವನ್ನು ಸ್ವೀಕರಿಸಿದ್ದೇವೆ ಮತ್ತು ಈ ಸಂದರ್ಭದಲ್ಲಿ ಹೊರಬರುವುದಾಗಿ ಭರವಸೆ ನೀಡಿದ್ದೇವೆ.**
**ಹಾಗಾಗಿ ನಾವು ಅದನ್ನು ವಿರೋಧಿಸಲು ಸಾಧ್ಯವಿಲ್ಲ ಮತ್ತು ನಾನು ಒಬ್ಬಂಟಿಯಾಗಿ ಹೋಗಬೇಕಾದರೂ ಶತ್ರುಗಳ ವಿರುದ್ಧ ಏಕಾಂಗಿಯಾಗಿ ಎದುರಾಗುತ್ತೇನೆ.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹಝ್ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಬನೂ ನಝೀರ್, ಬದ್ರುಲ್ ಮೌಇದ್, ಬನೂ ಮುಸ್ತಲಖ್, ಅಹ್‌ಝಾಬ್ ಯುದ್ಧಗಳ ಬಗ್ಗೆ ಹಾಗೂ ಇಫ್ಕ್ ಘಟನೆಯ ಬಗ್ಗೆ ವಿವರಾತ್ಮಕ ಪ್ರಸ್ತಾವನೆ**

**ಮೂರು ದಿವಂಗತರಾದ ಸನ್ಮಾನ್ಯ ಮುಖ್ತಾರ್ ಅಹ್ಮದ್ ಗೊಂದಲ್ ಸಾಹಿಬ್‌ರ ಪತ್ನಿ ಸನ್ಮಾನ್ಯ ಮುಬಾರಕ ಬೇಗಂ ಸಾಹಿಬ, ಮೀರ್ ಅಬ್ದುಲ್‌ವಹೀದ್ ಸಾಹಿಬ್, ಮತ್ತು ಅಮೇರಿಕದ ಸನ್ಮಾನ್ಯ ಸಯ್ಯದ್ ವಖಾರ್ ಅಹ್ಮದ್ ಸಾಹಿಬ್‌ರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **28–01–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹಝ್ರತ್ ಅಬೂಬಕರ್(ರ) ಪ್ರಸ್ತಾಪ ನಡೆಯುತ್ತಿತ್ತು. ಇಂದು ಸಹ ಅವರ ಬಗ್ಗೆ ಹೇಳಲಾಗುವುದು. ಹಮ್‌ರಾಉಲ್ ಅಸದ್ ಯುದ್ಧದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಶನವಾರದಂದು ಉಹದ್‌ನಿಂದ ಮರಳಿ ಬಂದರು. ರವಿವಾರದಂದು ಫಜ್ರ್ ಸಮಯವಾದಾಗ ಹಝ್ರತ್ ಬಿಲಾಲ್(ರ) ಅಧ್ಹಾನ್ ಕರೆ ನೀಡಿದರು ಮತ್ತು ಕುಳಿತುಕೊಂಡು ಹಝ್ರತ್ ಪೈಗಂಬರ್(ಸ) ಹೊರಗೆ ಬರಲು ಕಾಯುತ್ತಿದ್ದರು. ಅಷ್ಟರಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಅಮ್ರ್ ಬಿನ್ ಔಫ್ ಮುಝ್ನಿ ಹಝ್ರತ್ ಪೈಗಂಬರ್(ಸ)ರನ್ನು ಹುಡುಕುತ್ತಾ ಬಂದರು. ಹಝ್ರತ್ ಪೈಗಂಬರ್(ಸ) ಹೊರಗೆ ಬಂದಾಗ ಅವರು ನಿಂತುಕೊಂಡು ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಮಾಹಿತಿ ನೀಡಿದರು: ನಾನು ನನ್ನ ಮನೆಯ ಕಡೆಯಿಂದ ಬರುತ್ತಿದ್ದೇನೆ. ನಾನು ಮಲಲ್‌ನಲ್ಲಿ ಇದ್ದಾಗ ಖುರೈಶಿಯರು ಅಲ್ಲಿ ಡೇರೆ ಹಾಕಿ ತಂಗಿದ್ದರು. ಮಲಲ್ ಎಂಬುದು ಮಕ್ಕದ ಮಾರ್ಗದಲ್ಲಿ ಮದೀನದಿಂದ 28 ಮೈಲುಗಳ ದೂರದಲ್ಲಿರುವ ಒಂದು ಸ್ಥಳವಾಗಿದೆ. ಅವನು ಮಾತನ್ನು ಮುಂದುವರೆಸುತ್ತಾ ಮುಝ್ನಿ ಹೇಳಿದರು: ನಾನು ಅಬುಸುಫ್‌ಯನ್ ತನ್ನ ಸಂಗಡಿಗರೊಡನೆ ಹೀಗೆ ಹೇಳುವುದನ್ನು ಕೇಳಿದೆನು: ನೀವಂತು ಏನೂ ಮಾಡಿಲ್ಲ, ನೀವು ಮುಸ್ಲಿಮರಿಗೆ ನಷ್ಟವುಂಟು ಮಾಡಿಯೂ ಪರಾಜಿತಗೊಳಿಸಿಯೂ ಅವರನ್ನು ಬಿಟ್ಟುಬಿಟ್ಟಿದ್ದೀರಿ. ಅವರನ್ನು ನಾಶವಾಡಲಿಲ್ಲ. ನಿಮ್ಮ ವಿರುದ್ಧ ಹೋರಾಟ ನಡೆಸಲು ಒಟ್ಟುಗೂಡಬಹುದಾದ ದೊಡ್ಡ ದೊಡ್ಡ ಜನರು ಮುಸ್ಲಿಮರಲ್ಲಿ ಬಾಕಿಯುಳಿದಿದ್ದಾರೆ. ಆದ್ದರಿಂದ ಅವರಲ್ಲಿ ಬಾಕಿಯುಳಿದಿರುವ ಜನರನ್ನು ಬೇರುಸಹಿತ ಕಿತ್ತುಹಾಕಲಿಕ್ಕಾಗಿ ನೀವು ಮರಳಿಹೋಗಿರಿ. ಕಾಫಿರ್‌ಗಳ ನಡುವೆ ಇದ್ದ ಸಫ್‌ವಾನ್ ಬಿನ್ ಉಮಯ್ಯ ಈ ಮಾತನ್ನು ಮುರಿಯುತ್ತಾ ಹೇಳಿದನು: ಎಲೈ ನನ್ನ ಸಮುದಾಯ ಹಾಗೆ ಮಾಡದಿರು. ಏಕೆಂದರೆ ಮುಸ್ಲಿಮರು ಯುದ್ಧ ಮಾಡಿರುವರು. ಯುದ್ಧ ಮಾಡಲು ಬರದೇ ಬಾಕಿಯುಳಿದಿರುವ ಜನರು ಈಗ ನಿಮ್ಮ ವಿರುದ್ಧ ಹೋರಾಟ ನಡೆಸಲು ಒಟ್ಟುಗೂಡುವರು ಎಂಬ ಭಯ ನನಗಿದೆ. ವಿಜಯ ನಿಮಗೆ ಸಿಕ್ಕಿಯಾಗಿದೆ. ಇನ್ನು ನೀವು ಪುನಃ ಹೊರಟರೆ ನೀವು ಸೋತು ಹೋಗುವಿರಿ. ಈ ಮಾತುಕತೆಯ ಮಾಹಿತಿಯನ್ನು ಹಝ್ರತ್ ಮುಝ್ನಿಯಿಂದ ಆಲಿಸಿದ ನಂತರ ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರನ್ನು ಕರೆದರು ಮತ್ತು ಅವರಿಬ್ಬರೊಡನೆ ಮುಝ್ನಿ ಹೇಳಿದ ಸಂಗತಿಯನ್ನು ತಿಳಿಸಿದರು. ಆಗ ಅವರಿಬ್ಬರೂ ಹೇಳಿದರು: ಯಾ ರಸೂಲ್ಲಲಾಹ್, ನಮ್ಮ ಮಕ್ಕಳ ಮೇಲೆ ಅವರು ಆಕ್ರಮಣ ನಡೆಸದಿರಲಿಕ್ಕಾಗಿ ನಾವು ಶತ್ರುಗಳ ಕಡೆಗೆ ಹೋಗೋಣ. ಆಗ ಹಝ್ರತ್ ಪೈಗಂಬರ್(ಸ) ಬೆಳಿಗ್ಗಿನ ನಮಾಝಿನ ನಂತರ ಜನರನ್ನು ಕರೆದರು. ಶತ್ರುಗಳ ಕಡೆಗೆ ಹೋಗಲು ಮತ್ತು ಹಿಂದಿನ ದಿನ ಉಹದ್ ಯುದ್ಧದಲ್ಲಿ ನಮ್ಮೊಂದಿಗೆ ಇದ್ದವರೇ ಯುದ್ಧಕ್ಕಾಗಿ ಹೊರಡಲು ಆದೇಶಿಸುತ್ತಾ ಘೋಷಣೆ ಮಾಡುವಂತೆ ಹಝ್ರತ್ ಪೈಗಂಬರ್(ಸ) ಬಿಲಾಲ್(ರ)ರೊಡನೆ ಹೇಳಿದರು. ಹಿಂದಿನ ದಿನ ಕಟ್ಟಲಾಗಿದ್ದ ಧ್ವಜವನ್ನು ಹಝ್ರತ್ ಪೈಗಂಬರ್(ಸ) ಪಡೆದರು. ಅದನ್ನು ಅಲ್ಲಿಯ ವರೆಗೂ ಬಿಚ್ಚಲಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ಆ ಧ್ವಜವನ್ನು ಹಝ್ರತ್ ಅಲಿ(ರ)ರಿಗೆ ಕೊಟ್ಟರು. ಅದನ್ನು ಹಝ್ರತ್ ಅಬೂಬಕರ್(ರ)ರಿಗೆ ಕೊಡಲಾಗಿತ್ತು ಎಂದೂ ಹೇಳಲಾಗುತ್ತದೆ. (ಸಬ್ಲುಲ್ ಹುದಾ, ಸಂಪುಟ–4, ಪುಟ–308–309, ದಾರುಲ್ ಕುತುಬ್ ಇಲ್‌ಮಿಯ 1993) (ಮುಜಮುಲ್ ಬಲದಾನ್, ಸಂಪುಟ–5, ಪುಟ–225, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹೇಗಿದ್ದರೂ ಮುಸ್ಲಿಮರ ಈ ಸಂಘವು ಮದೀನದಿಂದ 8 ಮೈಲುಗಳ ದೂರದಲ್ಲಿ ಹಮ್‌ರಾಉಲ್ ಅಸದಿಗೆ ತಲುಪಿದಾಗ ಮುಶ್ರಿಕರು ಭಯಗೊಂಡರು ಮತ್ತು ಮದೀನದ ಕಡೆಗೆ ಪುನಃ ಹೋಗುವ ನಿರ್ಧಾರವನ್ನು ಬಿಟ್ಟುಬಿಟ್ಟರು ಹಾಗೂ ಮಕ್ಕದ ಕಡೆಗೆ ಮರಳಿ ಹೋದರು. (ಸಯ್ಯದುನಾ ಅಬೂಬಕರ್ ಶಖ್ಸಿಯ್ಯತ್ ಔರ್ ಕಾರ್ನಾಮೆ, ಅಲೀ ಮುಹಮ್ಮದ್ ಸಲಾಬಿ ಉರ್ದು ಅನುವಾದ, ಪುಟ–113)

ಬನೂ ನಝೀರಿಯ ಯುದ್ಧ ಹಿಜರೀ 4ರಲ್ಲಿ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಸಹಾಬರ ಒಂದು ಸಣ್ಣ ಸಂಘದೊಂದಿಗೆ ಬನೂ ನಝೀರಿನ ಬಳಿಗೆ ಹೋದರು. ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಏಕೆ ಹೋದರು ಎಂಬುದರ ಬಗ್ಗೆ ಅನೇಕ ವರದಿಗಳು ಲಭಿಸುತ್ತವೆ. ಒಂದು ವರದಿಯ ಪ್ರಕಾರ ಕೊಲ್ಲಲ್ಪಟ್ಟ ಬನೂ ಆಮಿರ್‌ನ ಇಬ್ಬರು ವ್ಯಕ್ತಿಗಳ ಪರಿಹಾರಧನವನ್ನು ವಸೂಲು ಮಾಡಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಹೋಗಿದ್ದರು. ಹಝ್ರತ್ ಪೈಗಂಬರ್(ಸ)ರೊಂದಿಗೆ ಸುಮಾರು 10ರಷ್ಟು ಸಹಾಬಿಯರು ಇದ್ದರು. ಅವರಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಲಿ(ರ) ಇದ್ದರು. ಹಝ್ರತ್ ಪೈಗಂಬರ್(ಸ) ಅಲ್ಲಿಗೆ ತಲುಪಿ ಅವರೊಂದಿಗೆ ಹಣದ ಮಾತುಕತೆ ಮಾಡಿದಾಗ ಯಹೂದಿಯರು ಹೇಳಿದರು: ಹೇ ಅಬುಲ್‌ಖಾಸಿಂ. ಮೊದಲು ನೀವು ಊಟ ಮಾಡಿರಿ. ಅನಂತರ ನಿಮ್ಮ ಕೆಲಸದ ಕಡೆಗೆ ಬರೋಣ. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಒಂದು ಗೋಡೆಗೆ ಒರಗಿ ಕುಳಿತುಕೊಂಡಿದ್ದರು.

ಯಹೂದಿಯರು ಪರಸ್ಪರ ಗೂಢಾಲೋಚನೆ ನಡೆಸುತ್ತಾ ಹೀಗೆ ಹೇಳತೊಡಗಿದರು: ಈ ವ್ಯಕ್ತಿಯನ್ನು ಎಂದರೆ, ಹಝ್ರತ್ ಪೈಗಂಬರ್(ಸ)ರನ್ನು ಮುಗಿಸಲು ಇದಕ್ಕಿಂತ ಉತ್ತಮ ಅವಕಾಶ ಮತ್ತು ಸಂದರ್ಭ ಇನ್ನು ಸಿಗಲಿಕ್ಕಿಲ್ಲ. ಆದ್ದರಿಂದ ಅವರಿಂದ ಮುಕ್ತಿ ಪಡೆಯಲಿಕ್ಕಾಗಿ ನಿಮ್ಮಲ್ಲಿ ಯಾರು ಈ ಮನೆಯ ಮೇಲೆ ಏರಿಕೊಂಡು ಒಂದು ದೊಡ್ಡ ಕಲ್ಲು ಅವರ ಮೇಲೆ ಬೀಳಿಸುತ್ತೀರಿ? ಆಗ ಯಹೂದಿಯರ ಒಬ್ಬ ಸರದಾರನಾದ ಅಮ್ರ್ ಬಿನ್ ಜಹಾಶ್ ಇದಕ್ಕೆ ತಯಾರಾದನು ಮತ್ತು

ಅದಕ್ಕಾಗಿ ಸಿದ್ಧನಿದ್ದೇನೆ ಎಂದು ಹೇಳಿದನು. ಆದರೆ ಅದೇ ಸಮಯದಲ್ಲಿ ಸಲಾಂ ಬಿನ್ ಮಶ್ಕಮ್ ಎಂಬ ಹೆಸರಿನ ಮತ್ತೊಬ್ಬ ಯಹೂದಿ ಈ ನಿರ್ಧಾರವನ್ನು ವಿರೋಧಿಸಿದನು. ಅವನು ಹೇಳಿದನು: ಈ ಕೆಲಸ ಖಂಡಿತ ಮಾಡಬೇಡಿರಿ. ಅಲ್ಲಾಹನಾಣೆ, ನೀವು ಯೋಚಿಸುವ ಎಲ್ಲ ಸಂಗತಿಗಳ ಮಾಹಿತಿ ಅವರಿಗೆ ಲಭಿಸುವುದು. ಇದು ಪ್ರತಿಜ್ಞೆಯ ಉಲ್ಲಂಘನೆಯಾಗಿದೆ. ನಮ್ಮ ಮತ್ತು ಅವರ ನಡುವೆ ಒಡಂಬಡಿಕೆ ಮತ್ತು ಒಪ್ಪಂದವಿದೆ.

ಅನಂತರ ಹಝ್ರತ್ ಪೈಗಂಬರ್(ಸ)ರ ಮೇಲೆ ಕಲ್ಲನ್ನು ಬೀಳಿಸಲು ಆ ವ್ಯಕ್ತಿ ತಲುಪಿದಾಗ ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲಾಹನಿಂದ ಈ ಗೂಢಾಲೋಚನೆಯ ಅರಿವು ಲಭಿಸಿತು. ಯಹೂದಿಯರು ಏನು ಮಾಡಲು ಹೋಗುತ್ತಿದ್ದಾರೆ ಎಂಬುದರ ಬಗ್ಗೆ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ತಿಳಿಸಿಕೊಟ್ಟನು. ಹಝ್ರತ್ ಪೈಗಂಬರ್(ಸ) ಬೇಗನೇ ಆ ಜಾಗದಿಂದ ಎದ್ದರು ಮತ್ತು ತನ್ನ ಸಹಚರರಿಂದ ಬೇರ್ಪಟ್ಟು ಏನೋ ಕೆಲಸವಿದೆ ಎಂಬಂತೆ ಅಲ್ಲಿಂದ ಹೊರಟು ಹೋದರು. ಹಝ್ರತ್ ಪೈಗಂಬರ್(ಸ) ಬೇಗನೇ ಮದೀನಕ್ಕೆ ಮರಳಿದರು. ಹಝ್ರತ್ ಪೈಗಂಬರ್(ಸ) ಮದೀನ ತಲುಪಿದ ನಂತರ ಮುಹಮ್ಮದ್ ಬಿನ್ ಮಸ್ಲಮರನ್ನು ಬನೂ ನಝೀರಿನ ಬಳಿಗೆ ಕಳುಹಿಸಿ ಹೀಗೆ ಸಂದೇಶ ಕಳುಹಿಸಿದರು: ನನ್ನ ಪಟ್ಟಣದಿಂದ ಎಂದರೆ ಮದೀನದಿಂದ ಹೊರಗೆ ಹೋಗಿರಿ. ನೀವೀಗ ಈ ಪಟ್ಟಣದಲ್ಲಿ ಇರುವಂತಿಲ್ಲ. ನೀವು ಮಾಡಿರುವ ಯೋಜನೆ ಮೋಸಗಾರಿಕೆಯದ್ದಾಗಿದೆ. ಇದು ಪ್ರತಿಜ್ಞೆಯ ಉಲ್ಲಂಘನೆಯಾಗಿದೆ. ಹಝ್ರತ್ ಪೈಗಂಬರ್(ಸ) ಯಹೂದಿಯರಿಗೆ 10 ದಿನಗಳ ಸಾವಕಾಶವನ್ನು ಕೊಟ್ಟರು. ಆದರೆ ಅವರು ನಿರಾಕರಿಸಿದರು ಮತ್ತು ನಾವು ನಮ್ಮ ಸ್ವದೇಶವನ್ನು ಖಂಡಿತ ಬಿಟ್ಟುಬಿಡಲಾರೆವು ಎಂದು ಹೇಳಿದರು. ಈ ಸಂದೇಶದೊಂದಿಗೆ ಮುಸ್ಲಿಮರು ಯುದ್ಧದ ತಯಾರಿಯನ್ನು ಮಾಡಿದರು. ಎಲ್ಲ ಮುಸ್ಲಿಮರು ಒಟ್ಟುಗೂಡಿದಾಗ ಹಝ್ರತ್ ಪೈಗಂಬರ್(ಸ) ಬನೂ ನಝೀರನ್ನು ಎದುರಿಸಲು ಹೊರಟರು. ಯುದ್ಧದ ಬಾವುಟವನ್ನು ಹಝ್ರತ್ ಅಲಿ(ರ) ಎತ್ತಿ ಹಿಡಿದರು. ಹಝ್ರತ್ ಪೈಗಂಬರ್(ಸ) ಅವರ ಕೋಟೆಗಳನ್ನು ಸುತ್ತುವರೆದು ಮುತ್ತಿಗೆ ಹಾಕಿದರು. ಅವರ ಸಹಾಯಕ್ಕಾಗಿ ಯಾರೂ ಬರಲಿಲ್ಲ. ಹಝ್ರತ್ ಪೈಗಂಬರ್(ಸ) ಬನೂ ನಝೀರ್ ಕಡೆಗೆ ಸೈನಿಕ ದಾಳಿ ನಡೆಸಿದ ನಂತರ ಇಶಾದ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ತನ್ನ ಹತ್ತು ಸಹಾಬಿಯರ ಜೊತೆಗೆ ಮನೆಗೆ ಮರಳಿ ಬಂದರು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ) ಇಸ್ಲಾಮಿನ ಸೈನ್ಯದ ಕಮಾನನ್ನು ನೇತೃತ್ವವನ್ನು ಒಂದು ವರದಿ ಪ್ರಕಾರ ಹಝ್ರತ್ ಅಲಿ(ರ)ರಿಗೆ ಒಪ್ಪಿಸಿದರು. ಆದರೆ ಮತ್ತೊಂದು ವರದಿ ಪ್ರಕಾರ ಈ ಸೌಭಾಗ್ಯ ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿತು ಎಂದಿದೆ. ಒಂದೆಡೆ ಹಝ್ರತ್ ಪೈಗಂಬರ್(ಸ) ಬಹಳ ಕಠಿಣವಾಗಿ ಮುತ್ತಿಗೆ ಹಾಕಿದ್ದರು ಮತ್ತೊಂದೆಡೆ ಯಹೂದಿಯರ ಹೃದಯದಲ್ಲಿ ಅಲ್ಲಾಹನು ಮುಸ್ಲಿಮರ ಕುರಿತು ಭಯವನ್ನು ಹುಟ್ಟಿಸಿದನು. ಕೊನೆಗೆ ಅವರನ್ನು ಜೀವಂತವಾಗಿ ಬಿಟ್ಟುಬಿಡಲು ಮತ್ತು ಆಯುಧಗಳನ್ನು ಹೊರತುಪಡಿಸಿ ಒಂಟೆಗಳ ಮೇಲೆ ಕೊಂಡುಹೋಗಲು ಸಾಧ್ಯವಾದ ಎಲ್ಲ ಸಾಮಾನುಗಳೊಂದಿಗೆ ದೇಶವನ್ನು ಬಿಟ್ಟು ಹೋಗಲು ಅನುಮತಿ ಕೊಡುವಂತೆ ಯಹೂದಿಯರು ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಿದರು. ಹಝ್ರತ್ ಪೈಗಂಬರ್(ಸ) ಅವರ ಶರತ್ತು ಮತ್ತು ವಿನಂತಿಯನ್ನು ಅಂಗೀಕರಿಸಿದರು. ಒಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) 15 ದಿವಸಗಳ ತನಕ ಅವರನ್ನು ಸುತ್ತುವರೆದಿದ್ದರು. ಆದರೆ ಕೆಲವು ವರದಿಗಳಲ್ಲಿ ದಿನಗಳ ಬಗ್ಗೆ ಭಿನ್ನಾಭಿಪ್ರಾಯಗಳಿವೆ. (ಅಸ್ಸೀರತುಲ್ ಹಲಬೀಯ, ಸಂಪುಟ–2, ಪುಟ–357–361, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹಝ್ರತ್ ಪೈಗಂಬರ್(ಸ) ಅನ್ಸಾರರ ಅನುಮತಿಯಿಂದ ಬನೂ ನಝೀರ್ ಯುದ್ಧದಿಂದ ಲಭಿಸಿದ ಎಲ್ಲ ಯುದ್ಧ ಸಂಪತ್ತನ್ನು ಮುಹಾಜಿರರಿಗೆ ವಿತರಣೆ ಮಾಡಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಹೇ ಅನ್ಸಾರರ ಸಂಘವೇ, ಅಲ್ಲಾಹನು ನಿಮಗೆ ಉತ್ತಮ ಪ್ರತಿಫಲ ನೀಡಲಿ. (ಸಬ್ಲುಲ್ ಹುದಾ ವರ್‌ರ್‍ಶಾದ್, ಸಂಪುಟ–4, ಪುಟ–325, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಬದ್ರುಲ್ ಮೌಇದ್. ಇದು ಹಿಜರಿ 4ರ ಘಟನೆಯಾಗಿದೆ. ಈ ಯುದ್ಧದ ಕಾರಣವೇನೆಂದರೆ, ಅಬೂಸುಫ್‌ಯಾನ್ ಬಿನ್ ಹರಬ್ ಉಹದ್ ಯುದ್ಧದಿಂದ ಮರಳಿ ಬರುವಾಗ ಅವನು ಉಚ್ಚ ಸ್ವರದಲ್ಲಿ ಹೀಗೆ ಹೇಳಿದನು: ಮುಂದಿನ ವರ್ಷ ನಮ್ಮ ಮತ್ತು ನಿಮ್ಮ ಭೇಟಿ ಬದ್ರುಸ್ಸಫ್ರ ಎಂಬ ಸ್ಥಳದಲ್ಲಿ ಆಗುವುದು. ನಾವು ಅಲ್ಲಿ ಯುದ್ಧ ಮಾಡುವೆವು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್(ರ)ರೊಡನೆ ಹೇಳಿದರು: ಸರಿ ಇನ್‌ಶಾ ಅಲ್ಲಾಹ್ ಎಂದು ಅವನೊಡನೆ ಹೇಳು. ಇದೇ ಮಾತಿನೊಂದಿಗೆ ಜನರು ಅಲ್ಲಿಂದ ಹೊರಟುಹೋಗಿದ್ದರು. ಖುರೈಶಿಗಳು ಮರಳಿಬಂದು ತನ್ನ ಜನರೊಡನೆ ಈ ವಾಗ್ದಾನದ ಬಗ್ಗೆ ಹೇಳಿಕೊಟ್ಟರು. ಮಕ್ಕ ಮತ್ತು ಮದೀನದ ಮಧ್ಯೆ ಒಂದು ಪ್ರಸಿದ್ಧ ಬಾವಿಯಿದೆ. ಅದು ಸಫ್‌ರಾ ಕಣಿವೆ ಮತ್ತು ಜಾರ್ ಎಂಬ ಪ್ರದೇಶದ ನಡುವೆ ಇದೆ. ಬದ್ರ್ ಮೈದಾನ ಮದೀನದಿಂದ 150 ಕಿ.ಮಿ. ದೂರದಲ್ಲಿ ಇದೆ. ಜಾಹಿಲಿಯ ಕಾಲದಲ್ಲಿ, ಎಂದರೆ ಇಸ್ಲಾಮಿಗೆ ಮುಂಚೆ ಈ ಜಾಗದಲ್ಲಿ ಪ್ರತಿ ವರ್ಷ ಧುಲ್‌ಕಾದ 1ರಿಂದ 8 ದಿನಗಳ ತನಕ ಒಂದು ದೊಡ್ಡ ಮೇಳ ನಡೆಯುತಿತ್ತು. ಹೇಗಿದ್ದರೂ ವಾಗ್ದಾನದ ಸಮಯ ಸಮೀಪವಾಗುತ್ತಿದ್ದಂತೆ ಅಬೂಸುಫ್‌ಯಾನ್ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗುವುದರಿಂದ ಹಿಂಜರಿಕೆ ತೋರಿಸುತ್ತಿದ್ದನು. ಅವನಿಗೆ ಭಯವಾಗುತ್ತಿತ್ತು. ಈ ನಿಶ್ಚಿತ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಅವನ ಭೇಟಿಯಾಗದಿರಲಿ ಎಂದೇ ಬಯಸುತ್ತಿದ್ದನು. ಒಂದು ದೊಡ್ಡದಾದ ಸೈನ್ಯದೊಂದಿಗೆ ಮುಸ್ಲಿಮರ ಮೇಲೆ ದಾಳಿ ನಡೆಸಲು ತಯಾರಿ ಮಾಡುತ್ತಿದ್ದಾನೆ ಎಂಬ ಭಾವನೆ ಮೂಡಿಸಲು ಪ್ರಯತ್ನಿಸುತ್ತಿದ್ದನು. ಮುಸ್ಲಿಮರು ಗಾಬರಿಗೊಳ್ಳಲಿಕ್ಕಾಗಿ ಅವನು ದೊಡ್ಡದಾದಂದು ಸೈನ್ಯವನ್ನು ಒಟ್ಟುಗೂಡಿಸುತ್ತಿದ್ದಾನೆ ಎಂಬ ಸುದ್ದಿ ಅರೇಬಿಯದ ಮೂಲೆ ಮೂಲೆಗೂ ಹರಡುವಂತೆ ಮಾಡಲು ಬಯಸುತ್ತಿದ್ದನು. (ಸಬ್ಲುಲ್ ಹುದಾ ವರ್‌ರ್‍ಶಾದ್, ಸಂಪುಟ–4, ಪುಟ–337, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಅಟ್ಲಸ್ ಸೀರತೆ ನಬವಿ. ಪುಟ–216, ದಾರುಸ್ಸಲಾಮ್ 1424ಹಿ)

ಒಂದು ವರದಿಯ ಪ್ರಕಾರ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಸಹ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ಅವರಿಬ್ಬರು ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನು ತನ್ನ ಧರ್ಮವನ್ನು ವಿಜಯಿಸುವವನು ಮತ್ತು ತನ್ನ ಪ್ರವಾದಿ(ಸ)ರಿಗೆ ಗೌರವವನ್ನು ದಯಪಾಲಿಸುವವನು. ನಾವು ಸಮುದಾಯದೊಂದಿಗೆ ವಾಗ್ದಾನವನ್ನು ಮಾಡಿದ್ದೇವೆ. ನಾವು ಅದರ ಉಲ್ಲಂಘನೆ ಮಾಡುವುದನ್ನು ಇಷ್ಟಪಡುವುದಿಲ್ಲ. ನಾವು ಹೋಗದಿದ್ದರೆ ಸತ್ಯನಿಷೇಧಿಗಳು ಅದನ್ನು ಭೀರುತ್ವವೆಂದು ಭಾವಿಸುವರು. ವಾಗ್ದಾನದ ಪ್ರಕಾರ ನೀವು ಹೋಗಿರಿ. ಅಲ್ಲಾಹನಾಣೆ, ಅದರಲ್ಲಿ ಖಂಡಿತ ಒಳಿತಿದೆ. ಈ ಭಾವನಾತ್ಮಕ ಮಾತುಗಳನ್ನು ಕೇಳಿ ಹಝ್ರತ್ ಪೈಗಂಬರ್(ಸ) ಬಹಳ ಸಂತೋಷಗೊಂಡರು. ಅಬೂಸುಫ್‌ಯಾನ್ ಸೈನ್ಯವನ್ನು ತಯಾರಿ ಮಾಡುತ್ತಿರುವುದಾಗಿ ಹರಡಲಾದ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿದಾಗ, ಅವರು ಹಝ್ರತ್ ಅಬ್ದುಲ್ಲಾಹ್ ಬಿನ್ ರವಾಹರನ್ನು ಮದೀನದಲ್ಲಿ ಅಮೀರ್‌ರನ್ನಾಗಿ ನಿಶ್ಚಯಿಸಿ ಹೊರಟರು. ಒಂದು ವರದಿಯ ಪ್ರಕಾರ ಅಬ್ದುಲ್ಲಾಹ್ ಬಿನ್ ಅಬೀ ಬಿನ್ ಸುಲೂಲ್‌ರನ್ನು ಅಮೀರ್‌ರನ್ನಾಗಿ ನಿಶ್ಚಯಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಧ್ವಜವನ್ನು ಹಝ್ರತ್ ಅಲಿ(ರ)ರಿಗೆ ಒಪ್ಪಿಸಿದರು ಮತ್ತು ಮುಸ್ಲಿಮರ ಜೊತೆಗೆ ಬದ್ರ್ ಮೈದಾನದ ಕಡೆಗೆ ರವಾನೆಯಾದರು. ಹಝ್ರತ್ ಪೈಗಂಬರ್(ಸ)ರ ಜೊತೆಗೆ 1500 ಮುಸ್ಲಿಮರಿದ್ದರು. ಮುಸ್ಲಿಮರು ಬದ್ರ್ ಪ್ರದೇಶದಲ್ಲಿ ಜರುಗುತ್ತಿದ್ದ ಮೇಳೆಯಲ್ಲಿ ಖರೀದಿ ಮತ್ತು ಮಾರಾಟ ಮಾಡಿದರು. ಅದರಿಂದ ಬಹಳಷ್ಟು ಲಾಭವನ್ನು ಗಳಿಸಿದರು. 8 ದಿನಗಳು ತಂಗಿದ ನಂತರ ಮರಳಿ ಮುಸ್ಲಿಮರು ಮದೀನಕ್ಕೆ ಬಂದರು. (ಸಬ್ಲುಲ್ ಹುದಾ ವರ್‌ರ್‍ಶಾದ್, ಸಂಪುಟ–4, ಪುಟ–337, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993) (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–46, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017)

ಎಂದರೆ, ಅಲ್ಲಿ ಹಾಕಲಾಗಿದ್ದ ಮೇಳದಲ್ಲಿ ಮುಸ್ಲಿಮರು ವ್ಯಾಪಾರವನ್ನು ಸಹ ಮಾಡಿದರು. ಯುದ್ಧ ನಡೆದರೆ ನಡೆಯಲಿ, ನಡೆಯದಿದ್ದರೆ ಕನಿಷ್ಠ ಪಕ್ಷ ವ್ಯಾಪಾರವಾದರೂ ನಡೆಯಲಿ ಎಂದು ಮುಸ್ಲಿಮರು ಭಾವಿಸಿದ್ದರು. ಇದರಿಂದ ಮುಸ್ಲಿಮರಿಗೆ ಬಹಳ ಲಾಭವುಂಟಾಯಿತು. ಉಹದ್ ಯುದ್ಧದಲ್ಲಿ, ಮುಂದಿನ ವರ್ಷ ಪುನಃ ಭೇಟಿಯಾಗೋಣವೆಂದು ಅಬುಸುಫ್‌ಯಾನ್ ಮುಸ್ಲಿಮರಿಗೆ ಪಂಥಾಹ್ವಾನ ನೀಡಿದ್ದನು. ಇದರ ಹೆಚ್ಚಿನ ವಿವರಣೆಯಿದೆ. ಅದರ ವಿವರಣೆಯನ್ನು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಉಹದ್ ಯುದ್ಧದ ನಂತರ ಮೈದಾನದಿಂದ ಮರಳುವಾಗ ಮುಂದಿನ ವರ್ಷ ಬದ್ರಿನ ಪ್ರದೇಶದಲ್ಲಿ ನಮ್ಮ ನಿಮ್ಮ ನಡುವೆ ಯುದ್ಧ ನಡೆಯುವುದು ಎಂದು ಅಬುಸುಫ್‌ಯಾನ್ ಮುಸ್ಲಿಮರಿಗೆ ಚಾಲೇಂಜ್ ಮಾಡಿದ್ದನು. ಹಝ್ರತ್ ಪೈಗಂಬರ್(ಸ) ಆ ಪಂಥಾಹ್ವಾನವನ್ನು ಅಂಗೀಕರಿಸಿದ್ದಾಗಿ ಘೋಷಣೆ ಮಾಡಿದ್ದರು. ಆದ್ದರಿಂದ ಮರುವರ್ಷ ಎಂದರೆ, ಹಿಜರಿ 4ರಲ್ಲಿ ಶವ್ವಾಲ್ ತಿಂಗಳ ಕೊನೆಯಾದಾಗ ಹಝ್ರತ್ ಪೈಗಂಬರ್(ಸ) ಒಂದುವರೆ ಸಾವಿರ ಸಹಾಬಿಯರ ಸಂಘದೊಂದಿಗೆ ಮದೀನದಿಂದ ಹೊರಟರು. ಮದೀನದಲ್ಲಿ ಅಬ್ದುಲ್ಲಾಹ್ ಬಿನ್ ಅಬೀಯನ್ನು ಅಮೀರ್‌ರನ್ನಾಗಿ ನಿಶ್ಚಯಿಸಿದರು. ಮತ್ತೊಂದೆಡೆ ಅಬುಸುಫ್‌ಯಾನ್ ಬಿನ್ ಹರಬ್ ಸಹ 2000 ಖುರೈಶಿ ಸೈನಿಕರೊಂದಿಗೆ

ಮಕ್ಕದಿಂದ ಹೊರಟರು. ಆದರೆ ಉಹದ್ ವಿಜಯ ಮತ್ತು ಇಷ್ಟು ದೊಡ್ಡ ಸಂಘವಿದ್ದು ಕೂಡ ಶತ್ರುಗಳು ಗಾಬರಿಗೊಂಡಿದ್ದರು. ಇಸ್ಲಾಂ ಅಳಿದುಹೋಗುವಂತಿದ್ದರೂ, ಇನ್ನೂ ಹೆಚ್ಚಿನ ಸೈನಿಕರ ಏರ್ಪಾಡು ಆಗದೇ ಮುಸ್ಲಿಮರನ್ನು ಎದುರಿಸಲು ಸಾಧ್ಯವಿಲ್ಲವೆಂದು ಭಾವಿಸುತ್ತಿದ್ದರು. ಹೀಗೆ ಅವನು ಮಕ್ಕದಲ್ಲಿರುವಾಗಲೇ ಮುಸ್ಲಿಮರ ಅಥವಾ ಸತ್ಯನಿಷೇಧಿಗಳ ಗೋತ್ರಗಳಿಗೆ ಸೇರಿರದ ನಈಂ ಎಂಬ ಹೆಸರಿನ ಒಬ್ಬ ವ್ಯಕ್ತಿಯನ್ನು ಮದೀನದ ಕಡೆಗೆ ರವಾನೆ ಮಾಡುತ್ತಾ ಅವನೊಡನೆ ಹೀಗೆ ತಾಕೀತು ಮಾಡಿದನು: ಹೇಗಾದರೂ ನೀನು ಮುಸ್ಲಿಮರನ್ನು ಗಾಬರಿಗೊಳಿಸಿ, ಬೆದರಿಸಿ, ಸುಳ್ಳನ್ನು ಸತ್ಯವೆಂದು ತೋರುವಂತೆ ಮಾಡಿ ಮುಸ್ಲಿಮರನ್ನು ಯುದ್ಧದಿಂದ ದೂರವಿರುವಂತೆ ಮಾಡು. ಯುದ್ಧ ಮಾಡದಂತೆ ಮಾಡು. ಹೀಗೆ ಆ ವ್ಯಕ್ತಿ ಮದೀನಕ್ಕೆ ಬಂದನು. ಖುರೈಶಿಗಳ ತಯಾರಿ, ಶಕ್ತಿ ಮತ್ತು ಅವರ ಆವೇಶ ಹಾಗೂ ಉತ್ಸಾಹಗಳ ಸುಳ್ಳು ಕಥೆಗಳನ್ನು ಹೇಳುತ್ತಾ ಅವನು ಮದೀನದಲ್ಲಿ ಒಂದು ಅಸಮಾಧಾನ ಮತ್ತು ತಳಮಳದ ಸ್ಥಿತಿಯನ್ನು ಉಂಟುಮಾಡಿದನು. ಎಲ್ಲಿಯ ವರೆಗೆ ಎಂದರೆ, ಕೆಲವು ದುರ್ಬಲರಾದ ಜನರು ಈ ಯುದ್ಧದಲ್ಲಿ ಭಾಗಿಯಾಗುವುದರಿಂದ ಹೆದರಿದರು. ಆದರೆ ಹಝ್ರತ್ ಪೈಗಂಬರ್(ಸ) ಹೊರಡಲು ಜನರನ್ನು ಹುರಿದುಂಬಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ತನ್ನ ಭಾಷಣದಲ್ಲಿ ಹೀಗೆ ಹೇಳಿದರು: ನಾವು ಸತ್ಯನಿಷೇಧಿಗಳ ಪಂಥಾಹ್ವಾನವನ್ನು ಸ್ವೀಕರಿಸಿಕೊಂಡು ಈ ಸಂದರ್ಭದಲ್ಲಿ ಹೊರಡುವುದಾಗಿ ವಾಗ್ದಾನ ಮಾಡಿದ್ದೇವೆ. ಆದ್ದರಿಂದ ಆ ವಾಗ್ದಾನವನ್ನು ಉಲ್ಲಂಘಿಸಲು ಸಾಧ್ಯವಿಲ್ಲ. ನನಗೆ ಒಬ್ಬಂಟಿಯಾಗಿ ಹೋಗಬೇಕಾಗಿ ಬಂದರೂ ನಾನು ಹೋಗುವೆನು. ಶತ್ರುಗಳ ವಿರುದ್ಧ ಒಬ್ಬಂಟಿಯಾಗಿಯೇ ಹೋರಾಡುವೆನು. ಹೀಗೆ ಹೇಳಿದಾಗ ಜನರ ಭಯ ಕಡಿಮೆಯಾಯಿತು ಮತ್ತು ಅವರು ಬಹಳ ಆವೇಶ ಹಾಗೂ ನಿಷ್ಠೆಯಿಂದ ಹಝ್ರತ್ ಪೈಗಂಬರ್(ಸ)ರೊಂದಿಗೆ ಹೊರಡಲು ತಯಾರಾದರು.

ಹೇಗಿದ್ದರೂ ಹಝ್ರತ್ ಪೈಗಂಬರ್(ಸ) ಒಂದುವರೆ ಸಾವಿರ ಸಹಾಬಿಯರ ಜೊತೆಗೆ ಮದೀನಕ್ಕೆ ರವಾನೆಯಾದರು. ಮತ್ತೊಂದೆಡೆ ಅಬುಸುಫ್‌ಯಾನ್ ತನ್ನ 2000 ಸಾವಿರ ಸೈನಿಕರೊಂದಿಗೆ ಮಕ್ಕದಿಂದ ಹೊರಟನು. ಆದರೆ ಅಲ್ಲಾಹನ ವಿಶಿಷ್ಟ ಸಹಾಯದಿಂದ ಮುಸ್ಲಿಮರು ತಮ್ಮ ವಾಗ್ದಾನದ ಪ್ರಕಾರ ಬದ್ರಿಗೆ ತಲುಪಿದರು. ಆದರೆ ಖುರೈಶಿಗಳು ಸ್ವಲ್ಪ ದೂರದ ವರೆಗೆ ಹೋಗಿ, ಪುನಃ ಮಕ್ಕದ ಕಡೆಗೆ ಮರಳಿದರು. ಆ ಘಟನೆ ಹೀಗಿದೆ: ನಈಮಿನ ಸುಳ್ಳು ಸುದ್ದಿಯಿಂದ ಏನೂ ಪ್ರಯೋಜನವಾಗಲಿಲ್ಲವೆಂದು ಅಬೂಸುಫ್‌ಯಾನಿಗೆ ಗೊತ್ತಾದಾಗ ಅವನು ಹೆದರಿದನು. ಈ ವರ್ಷ ಕಠಿಣ ಬರಗಾಲವಿದೆ. ಜನರು ಕಷ್ಟದಲ್ಲಿದ್ದಾರೆ. ಆದ್ದರಿಂದ ಯುದ್ಧ ಮಾಡುವುದು ಸರಿಯಲ್ಲ. ಹೆಚ್ಚು ಸೌಕರ್ಯ ಮತ್ತು ಸೌಲಭ್ಯದ ಸಮಯ ಬರುವಾದ ಹೆಚ್ಚಿನ ತಯಾರಿಯೊಂದಿಗೆ ಮದೀನದ ಮೇಲೆ ದಾಳಿ ನಡೆಸೋಣವೆಂದು ತನ್ನ ಸೈನಿಕರೊಂದಿಗೆ ಹೇಳಿಕೊಂಡು ಅಬುಸುಫ್‌ಯಾನ್ ಸೈನ್ಯದೊಂದಿಗೆ ಮಾರ್ಗದಲ್ಲೇ ಮರಳಿ ಹೋದನು. ಮುಸ್ಲಿಮರ ಸೈನ್ಯ 8 ದಿನಗಳ ತನಕ ಬದ್ರಿನಲ್ಲಿ ಇದ್ದರು. ಏಕೆಂದರೆ ಅಲ್ಲಿ ದ್ಸುಲ್‌ಖಾದದ ಆರಂಭದಲ್ಲಿ ಪ್ರತಿ ವರ್ಷ ಮೇಳ ನಡೆಯುತ್ತಿತ್ತು. ಅದರ ಬಗ್ಗೆ ಮೊದಲು ಹೇಳಿದ್ದೆ. ಈ ದಿನಗಳಲ್ಲಿ ಅನೇಕ ಸಹಾಬಿಯರು ಈ ಮೇಳದಲ್ಲಿ ಸಾಕಷ್ಟು ಲಾಭವನ್ನು ಗಳಿಸಿದರು. ಎಂಟು ದಿನಗಳಲ್ಲಿ ಅವರು ತಮ್ಮ ಸಂಪತ್ತನ್ನು ದುಪ್ಪಟ್ಟುಗೊಳಿಸಿದರು. ಮೇಳ ಕೊನೆಗೊಂಡಾಗ ಮತ್ತು ಖುರೈಶಿನ ಸೈನ್ಯ ಬರದಿದ್ದಾಗ ಹಝ್ರತ್ ಪೈಗಂಬರ್(ಸ) ಬದ್ರಿನಿಂದ ಹೊರಟು ಮದೀನಕ್ಕೆ ಮರಳಿ ಹೋದರು. ಈ ಯುದ್ಧವನ್ನು ಬದ್ರುಲ್ ಮೌಇದ್ ಯುದ್ಧವೆಂದು ಕರೆಯಲಾಗುತ್ತದೆ. ಎಂದರೆ ವಾಗ್ದಾನ ಮಾಡಲ್ಪಟ್ಟ ಯುದ್ಧ. ಖುರೈಶಿಗಳು ಮಕ್ಕಕ್ಕೆ ಮರಳಿ ಹೋಗಿ ಮದೀನದ ಮೇಲೆ ದಾಳಿ ನಡೆಸಲು ತಯಾರಿ ಶುರುಮಾಡಿದರು. (ಸೀರತ್ ಖಾತಮನ್ನಬೀಈನ್, ಪುಟ–529–530)

ಬನೂ ಮುಸ್ತಲಖ್ ಎಂಬ ಒಂದು ಯುದ್ಧವಿದೆ. ಅದು ಹಿಜರೀ 5, ಶಾಬಾನ್ ತಿಂಗಳಲ್ಲಿ ನಡೆದಿತ್ತು. ಬನೂ ಮುಸ್ತಲಖ್ ಯುದ್ಧದ ಮತ್ತೊಂದು ಹೆಸರು ಮರೀಸೀಅ್ ಎಂದಾಗಿದೆ. ಬನೂ ಮುಸ್ತಲಕ್ ಗೋತ್ರ ಎಂಬುದು ಖುಝಾಅ ಗೋತ್ರದ ಭಾಗವಾಗಿದೆ. ಈ ಗೋತ್ರವು ಒಂದು ಬಾವಿಯ ಬಳಿ ವಾಸಿಸುತ್ತಿತ್ತು. ಆ ಬಾವಿಯ ಹೆಸರು ಮರೀಸೀಅ್ ಎಂದಾಗಿದೆ. ಇದು ಫುರೂಅ್‌ನಿಂದ ಒಂದು ದಿನದ ಯಾತ್ರೆಯ ದೂರದಲ್ಲಾಗಿತ್ತು. ಫುರೂಅ್ ಮತ್ತು ಮದೀನದ ನಡುವೆ ಸುಮಾರು 96 ಮೈಲುಗಳ ದೂರವಿದೆ. (ಅತ್ತಬಖಾತುಲ್ ಕುಬ್ರ, ಭಾಗ–2, ಪುಟ–48, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಅಲ್ಲಾಮ ಇಬ್ನು ಇಸ್‌ಹಾಖ್‌ರ ಪ್ರಕಾರ ಬನೂ ಮುಸ್ತಲಖ್ ಯುದ್ಧ ಹಿಜರಿ 6ರಲ್ಲಿ ನಡೆದಿತ್ತು. ಮೂಸಾ ಬಿನ್ ಉಖ್ಬರ ಪ್ರಕಾರ ಹಿಜರೀ 4ರಲ್ಲಿ ನಡೆದಿತ್ತು. ವಾಖಿದಿಯ ಪ್ರಕಾರ ಅದು 5 ಹಿಜರೀ ಶಾಬಾನ್ ತಿಂಗಳಲ್ಲಿ ನಡೆದಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್‌ರು ಸಹ ಇದು ಹಿಜರೀ 5ರಲ್ಲಿ ನಡೆದಿತ್ತು ಎಂದು ಬರೆದಿರುವರು. ಹೇಗಿದ್ದರೂ ಬನೂ ಮುಸ್ತಲಖ್ ಗೋತ್ರವು ಮುಸ್ಲಿಮರ ಮೇಲೆ ಆಕ್ರಮಣ ನಡೆಸಲು ನಿರ್ಧರಿಸಿದ್ದಾರೆ ಎಂಬ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಆಗ ಹಝ್ರತ್ ಪೈಗಂಬರ್(ಸ) ಅವರ ಕಡೆಗೆ ಹಿಜರೀ 5 ಶಾಬಾನ್ ತಿಂಗಳಲ್ಲಿ 700 ಸಹಾಬಿಯರ ಜೊತೆಗೆ ಹೊರಟರು. ಹಝ್ರತ್ ಪೈಗಂಬರ್(ಸ) ಮುಹಾಜಿರರ ಬಾವುಟವನ್ನು ಹಝ್ರತ್ ಅಬೂಬಕರ್(ರ)ರಿಗೆ ಒಪ್ಪಿಸಿದರು. ಮತ್ತೊಂದು ವರದಿಯ ಪ್ರಕಾರ ಹಝ್ರತ್ ಪೈಗಂಬರ್(ಸ) ಮುಹಾಜಿರರ ಧ್ವಜವನ್ನು ಹಝ್ರತ್ ಅಮ್ಮಾರ್ ಬಿನ್ ಯಾಸಿರಿಗೆ ನೀಡಿದರು ಮತ್ತು ಅನ್ಸಾರರ ಧ್ವಜವನ್ನು ಹಝ್ರತ್ ಸಅದ್ ಬಿನ್ ಉಬಾದರಿಗೆ ಕೊಟ್ಟರು. (ಅಲ್‌ಬದಾಯ ವನ್ನಹಾಯ, ಸಂಪುಟ–4, ಪುಟ–169–170,ದ ಆರುಲ್ ಕುತುಬ್ ಇಲ್‌ಮಿಯ ಬೈರೂತ್)

**ಇಫ್‌ಕಿನ ಘಟನೆ**. ಮಹಾ ಸುಳ್ಳಾರೋಪದ ಘಟನೆ. ಅದರ ವಿಶದ ವಿವರಣೆ ಇದಾಗಿದೆ: ಬನೂ ಮುಸ್ತಲಖ್ ಯುದ್ಧದಿಂದ ಮರಳಿ ಬರುವಾಗ ಹಝ್ರತ್ ಅಬೂಬಕರ್(ರ)ರ ಪುತ್ರಿಯಾದ ಹಝ್ರತ್ ಆಯಿಶ(ರ)ರ ಮೇಲೆ ಕಪಟವಿಶ್ವಾಸಿಗಳು ಆರೋಪ ಹೊರಿಸಿದರು. ಈ ಘಟನೆ ಚರಿತ್ರೆಯಲ್ಲಿ ಇಫ್‌ಕ್ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಎಂದರೆ ಮಹಾ ಸುಳ್ಳಾರೋಪದ ಘಟನೆ. ಸಹೀಹ್ ಬುಖಾರಿಯಲ್ಲಿ ಹಝ್ರತ್ ಆಯಿಶ(ರ)ರಿಂದ ಇದು ವರದಿಯಾಗಿದೆ. ಈ ವರದಿಯನ್ನು ಸಹಾಬಿಯೊಬ್ಬರ ಪ್ರಸ್ತಾಪದಲ್ಲಿ ಹೇಳಿದ್ದೆ. (ಖುತ್‌ಬ ಜುಮುಅ, 14–12–2018, ಅಲ್‌ಫಝ್ಲ್ ಇಂಟರ್‌ನ್ಯಾಶ್ನಲ್, 4–01–2019, ಪುಟ–6,7)

ಆದರೆ ಇಲ್ಲಿ ಹಝ್ರತ್ ಅಬೂಬಕರ್(ರ)ರಿಗೆ ಸಂಬಂಧಿಸಿದ ಪ್ರಸ್ತಾಪದಲ್ಲೂ ವಿವರಿಸುವುದು ಆವಶ್ಯಕ.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಯಾವುದಾದರೂ ಯಾತ್ರೆಗೆ ಹೊರಡಲು ನಿರ್ಧರಿಸುವಾಗ ಅವರು ತನ್ನ ಪತ್ನಿಯರ ನಡುವೆ ಚೀಟಿ ಎತ್ತುತ್ತಿದ್ದರು. ಯಾರ ಹೆಸರು ಬರುತ್ತಿತ್ತೋ ಅವರನ್ನು ತನ್ನ ಜೊತೆಗೆ ಕೊಂಡುಹೋಗುತ್ತಿದ್ದರು. ಹಝ್ರತ್ ಪೈಗಂಬರ್(ಸ) ಒಂದು ಯುದ್ಧದ ವೇಳೆ ನಮ್ಮ ಮಧ್ಯೆ ಚೀಟಿ ಎತ್ತಿದರು. ಆಗ ನನ್ನ ಹೆಸರು ಬಂತು. ನಾನು ಅವರ ಜೊತೆಗೆ ಹೋದೆನು. ಹಿಜಾಬಿನ ಆಜ್ಞೆ ಅವತೀರ್ಣವಾದ ನಂತರದ ಘಟನೆಯಿದು. ನನ್ನನ್ನು ಪಲ್ಲಕಿಯಲ್ಲಿ ಎತ್ತಲಾಗುತ್ತಿತ್ತು. ಅದರಿಂದಲೇ ಇಳಿಸಲಾಗುತ್ತಿತ್ತು. ಯುದ್ಧದ ನಂತರ ಎಲ್ಲರೂ ಮರಳಿ ಬಂದರು. ನಾವು ಮದೀನದ ಸಮೀಪಕ್ಕೆ ರಾತ್ರಿ ಸಮಯದಲ್ಲಿ ತಲುಪಿ, ಅಲ್ಲಿ ತಂಗಿದ ನಂತರ ಅಲ್ಲಿಂದ ಹೊರಡಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು. ಹೊರಡಲು ಘೋಷಿಸಲಾದಾಗ ನಾನು ಕೂಡ ಎದ್ದೆ. ನಾನು ಹೊರಟು ಸೈನ್ಯಕ್ಕಿಂತ ಮುಂದಾದೆ. ನಾನು ನನ್ನ ಆವಶ್ಯಕತೆಗಳನ್ನು ಪೂರೈಸಿದ ನಂತರ ಪಲ್ಲಕ್ಕಿಯ ಕಡೆಗೆ ಮರಳಿ ಬಂದೆನು. ನಾನು ನನ್ನ ಕುತ್ತಿಗೆಗೆ ಕೈ ಹಾಕಿ ನೋಡಿದಾಗ ನನ್ನ ಮುತ್ತಿನ ಹಾರ ಮುರಿದು ಬಿದ್ದುಹೋಗಿದೆ ಎಂದು ತಿಳಿಯಿತು. ನಾನು ಮರಳಿ ಹೋಗಿ ನನ್ನ ಹಾರವನ್ನು ಹುಡುಕಲು ಹೋದೆನು. ಹುಡುಕುವುದರಲ್ಲೇ ನಿರತಳಾಗಿದ್ದೆ. ಅಷ್ಟರಲ್ಲಿ ನನ್ನ ಪಲ್ಲಕಿಯನ್ನು ಸವಾರಿಗಾಗಿ ತಯಾರು ಮಾಡುತ್ತಿದ್ದವರು ಬಂದು ಪಲ್ಲಕ್ಕಿಯನ್ನು ಎತ್ತಿದರು. ಅದನ್ನು ನಾನು ಸವಾರಿಯಾಗುತ್ತಿದ್ದ ಒಂಟೆಯ ಮೇಲೆ ಇರಿಸಿದರು. ನಾನು ಅದರೊಳಗೆ ಇದ್ದೇನೆ ಎಂದು ಅವರು ಭಾವಿಸಿದರು. ಏಕೆಂದರೆ ಆ ಕಾಲದಲ್ಲಿ ಮಹಿಳೆಯರು ಹಗುರರಾಗಿರುತ್ತಿದ್ದರು. ಅವರ ಮೈಯ ಮೇಲೆ ಹೆಚ್ಚು ಮಾಂಸವಿರುತ್ತಿರಲಿಲ್ಲ. ಬಹಳ ಕಡಿಮೆ ಆಹಾರ ಸೇವಿಸುತ್ತಿದ್ದರು. ಹೇಗಿದ್ದರೂ ಜನರು ಪಲ್ಲಕಿಯ ಭಾರದಲ್ಲಿ ಉಂಟಾದ ವ್ಯತ್ಯಾಸವನ್ನು ಅರಿಯಲಿಲ್ಲ. ಸಾಮಾನ್ಯವಾಗಿ ಎತ್ತುವಂತೆ ಅವರು ಅದನ್ನು ಎತ್ತಿದರು. ನಾನು ಕಿರಿವಯಸ್ಸಿನ ಹುಡುಗಿಯಾಗಿದ್ದೆ. ಅವರು ಒಂಟೆಯೊಂದಿಗೆ ಹೊರಟೇ ಬಿಟ್ಟರು. ನಾನು ನನ್ನ ಹಾರವನ್ನು ಕಂಡುಹಿಡಿದು ಬಂದಾಗ ಸೈನ್ಯ ಹೊರಟುಹೋಗಿತ್ತು. ನಾನು ಅವರು ತಂಗಿದ ಡೇರೆ ಇರುವ ಸ್ಥಳಕ್ಕೆ ಬಂದೆ. ಅಲ್ಲಿ ಯಾರೂ ಇರಲಿಲ್ಲ.

ಅನಂತರ ನಾನು ನನ್ನ ಡೇರೆಯ ಕಡೆಗೆ ಹೋದೆ. ನನ್ನನ್ನು ಕಾಣದೇ ಇರುವಾಗ ಅವರು ನನ್ನ ಬಳಿಗೆ ಮರಳಿ ಬರುವರು ಎಂಬ ಆಲೋಚನೆಯೊಂದಿಗೆ ನಾನು ಅಲ್ಲಿ ಕುಳಿತುಕೊಂಡೆ. ನಾನು ಕುಳಿತುಕೊಂಡಿರುವಾಗಲೇ ನನಗೆ ನಿದ್ದೆ ಬಂತು. ಸಫ್‌ವಾನ್ ಬಿನ್ ಮುಅತಲ್ ಝುಕ್‌ವಾನ ಸೈನ್ಯದ ಹಿಂದೆ ಇದ್ದರು. ಬೆಳಿಗ್ಗೆ ಅವರು ನನ್ನ ಡೇರೆಗೆ ಬಂದರು. ಅಲ್ಲಿ ಒಬ್ಬ ವ್ಯಕ್ತಿ ಮಲಗಿರುವುದನ್ನು ಕಂಡು ಅವರು ನನ್ನ ಬಳಿಗೆ ಬಂದರು. ಹಿಜಾಬಿನ ಆಜ್ಞೆಗೆ ಮುಂಚೆ ಅವರು ನನ್ನನ್ನು ಕಂಡಿದ್ದರು. ಅವರು **ಇನ್ನಾ ಲಿಲ್ಲಾಹ್** ಎಂದು ಹೇಳಿದಾಗ ನಾನು ಎಚ್ಚರಗೊಂಡೆ. ಅವರು ತನ್ನ ಒಂಟೆಯನ್ನು ಕುಳ್ಳಿರಿಸಿದರು. ಅದು ಕುಳಿತುಕೊಂಡಾಗ ನಾನು ಅದರ ಮೇಲೆ ಸವಾರಳಾದೆ. ಹೀಗೆ ನನ್ನೊಂದಿಗೆ

ಒಂಟೆ ನಡೆಯಿತು. ಕೊನೆಗೆ ನಾವು ಸೈನ್ಯದೊಂದಿಗೆ ತಲುಪಿದೆವು. ಅನಂತರ ಮಧ್ಯಾಹ್ನದ ಸಮಯದಲ್ಲಿ ಜನರು ಆರಾಮ ಮಾಡಲಿಕ್ಕಾಗಿ ಡೇರೆ ಹಾಕಿ ತಂಗಿದರು.

ಅನಂತರ ನಾಶವಾಗಲಿರುವವರು ನಾಶವಾದರು. ಈ ಆರೋಪದ ಸೂತ್ರಧಾರ ಅಬ್ದುಲ್ಲಾಹ್ ಬಿನ್ ಅಬೀ ಬಿನ್ ಸುಲೂಲ್ ಆಗಿದ್ದರು. ನಾವು ಮದೀನ ತಲುಪಿದೆವು. ಅಲ್ಲಿ ನಾನು ಒಂದು ತಿಂಗಳು ರೋಗಿಯಾಗಿದ್ದೆ. ಜನರು ಆರೋಪ ಹೊರಿಸುವವರ ಮಾತುಗಳನ್ನು ಆಲಿಸಲು ಶುರುಮಾಡಿದರು. ನಾನು ರೋಗಿಯಾಗಿರುವಾಗ ನನ್ನೊಂದಿಗೆ ಹಝ್ರತ್ ಪೈಗಂಬರ್(ಸ) ಸಾಮಾನ್ಯವಾಗಿ ತೋರಿಸುತ್ತಿದ್ದ ಕಾಳಜಿಯನ್ನು ತೋರಿಸದೇ ಇದ್ದಾಗ ನಾನು ಅಸಮಾಧಾನಗೊಂಡೆ. ನಾನು ರೋಗಗ್ರಸ್ತಳಾಗುವಾಗ ಹಝ್ರತ್ ಪೈಗಂಬರ್(ಸ) ಒಳಗೆ ಬಂದು ಸಲಾಂ ಹೇಳಿ ಹೇಗಿದ್ದೀಯ ಎಂದು ಕೇಳುತ್ತಿದ್ದರು. ನನಗೆ ಈ ಆರೋಪದ ಬಗ್ಗೆ ಏನೂ ಗೊತ್ತಿರಲಿಲ್ಲ. ನಾನು ಬಲಹೀನಳಾದಾಗ ನಾನು ಮಸ್‌ತಹ್ ಮನಾಸಿಅ್‌ರ ಕಡೆಗೆ ಹೋದೆ. ಅದು ನನ್ನ ಶೌಚಾಲಯದ ಸ್ಥಳವಾಗಿತ್ತು. ನಾವು ತಡರಾತ್ರಿಯಾಗುವ ವರೆಗೆ ಅದಕ್ಕಾಗಿ ಹೊರಡುತ್ತಿರಲಿಲ್ಲ. ರಾತ್ರಿಯಾಗಲು ಕಾಯುತ್ತಿದ್ದೆವು. ಇದು ನಮ್ಮ ಮನೆಯ ಸಮೀಪ ಶೌಚಾಲಯವನ್ನು ನಿರ್ಮಿಸುವುದಕ್ಕೆ ಮುಂಚಿನ ಸಂಗತಿಯಾಗಿದೆ. ಮೊದಲು ನಾವು ಹಿಂದಿನ ಅರೇಬಿಯರಂತೆ ಕಾಡಿಗೆ ಹೋಗಿ ಅಥವಾ ಹೊರಗೆ ಹೋಗಿ ಶೌಚಕಾರ್ಯಗಳನ್ನು ಮಾಡುತ್ತಿದ್ದೆವು. ನಾನು ಮತ್ತು ಉಮ್ಮೇ ಮಿಸ್ತಹ್ ಬಿನ್ತ್ ಅಬ್ದುರುಹಂ ಇಬ್ಬರೂ ಹೋದೆವು. ನಾವು ಹೋಗುತ್ತಿದ್ದಾಗ ಉಮ್ಮೇ ಮಿಸ್ತಹ್ ತನ್ನ ಹೊದಿಕೆಯನ್ನು ಹಿಡಿದು ಮಿಸ್ತಹ್ ನಾಶವಾದನು ಎಂದು ಹೇಳಿದಳು. ನಾನು ಅವಳೊಂದಿಗೆ ಹೇಳಿದೆ: ನೀವು ಹೇಳಿದ್ದು ಎಷ್ಟು ಕೆಟ್ಟ ಮಾತಾಗಿದೆ. ಬದ್ರ್ ಯುದ್ಧದಲ್ಲಿ ಇದ್ದ ಒಬ್ಬ ವ್ಯಕ್ತಿಯ ಬಗ್ಗೆ ನೀವು ಹೀಗೆ ಹೇಳುತ್ತಿದ್ದೀಯ? ಅವಳು ಹೇಳಿದಳು: ಎಲೈ ಮುಗ್ಧ ಹುಡುಗಿ, ಜನರು ಹೇಳುತ್ತಿರುವುದನ್ನು ನೀನು ಆಲಿಸಲಿಲ್ಲವೇ? ಆಗ ಅವಳು ನನ್ನ ಬಗ್ಗೆ ಸುಳ್ಳಾರೋಪ ಹೊರಿಸಿದವರ ಸಂಗತಿಯನ್ನು ನನಗೆ ತಿಳಿಸಿಕೊಟ್ಟಳು. ಇದರಿಂದ ನನ್ನ ಕಾಯಿಲೆ ಇನ್ನೂ ಹೆಚ್ಚಾಯಿತು.

ನಾನು ನನ್ನ ಮನೆಗೆ ಮರಳಿಬಂದಾಗ ಹಝ್ರತ್ ಪೈಗಂಬರ್(ಸ) ನನ್ನ ಬಳಿಗೆ ಬಂದರು ಮತ್ತು ಸಲಾಂ ಹೇಳಿದರು ಮತ್ತು ನೀನು ಹೇಗಿದ್ದೀಯ' ಎಂದು ಕೇಳಿದರು. ನಾನು ಹೇಳಿದೆ: 'ನನಗೆ ನನ್ನ ಹೆತ್ತವರ ಮನೆಗೆ ಹೋಗಲು ಅನುಮತಿ ಕೊಡಿರಿ. ಹೆತ್ತವರ ಮನೆಗೆ ಹೋಗಲು ಹಝ್ರತ್ ಪೈಗಂಬರ್(ಸ) ಅನುಮತಿ ನೀಡಿದರು. ಹೀಗೊಂದು ಸುದ್ದಿ ಹರಡಿರುವುದು ಸರಿಯೇ ಎಂದು ತಂದೆತಾಯಂದಿರಿಂದ ಖಚಿತಪಡಿಸಲು ನಾನು ಬಯಸುತ್ತಿದ್ದೆ. ನಾನು ಹೆತ್ತವರ ಬಳಿಗೆ ಬಂದೆ. ಜನರು ಏನು ಹೇಳುತ್ತಿದ್ದಾರೆಂದು ನಾನು ನನ್ನ ತಾಯಿಯನ್ನು ವಿಚಾರಿಸಿದೆ. ನನ್ನ ತಾಯಿ ಹೇಳಿದಳು: 'ಓ ಮಗಳೇ! ಅವರು ಏನು ಹೇಳುತ್ತಾರೆಂದು ನೀನು ಚಿಂತಿಸಬೇಡ. ಅಲ್ಲಾಹನಾಣೆ, ಒಬ್ಬ ವ್ಯಕ್ತಿಗೆ ಸುಂದರವಾದ ಪತ್ನಿಯಿದ್ದು, ಅವಳನ್ನು ಆ ವ್ಯಕ್ತಿ ಪ್ರೀತಿಸುತ್ತಿದ್ದಾರೆ ಎಂದಾದರೆ ಮತ್ತು ಆ ವ್ಯಕ್ತಿಗೆ ಬೇರೆ ಪತ್ನಿಯಂದಿರು ಸಹ ಇರುವರು ಎಂದಾದರೆ, ಅವಳ ವಿರುದ್ಧ ಕೆಟ್ಟದಾಗಿ ಮಾತನಾಡದೇ ಇರುವ ಸಾಧ್ಯತೆ ಬಹಳ ಕಡಿಮೆ. ನಾನು ಹೇಳಿದೆ 'ಅಲ್ಲಾಹನು ಪರಿಶುದ್ಧನು! ಜನರು ನನ್ನ ಬಗ್ಗೆ ಈ ಮಾತುಗಳನ್ನು ಹೇಳುತ್ತಿದ್ದಾರೆಯೇ?" ಹಝ್ರತ್ ಆಯಿಶ(ರ) ಹೇಳುತ್ತಾರೆ: ನಾನು ರಾತ್ರಿಯನ್ನು ನಿದ್ದೆ ಮಾಡದೇ ಕಳೆದೆ. ಹೀಗೆ ಬೆಳಿಗ್ಗೆ ಆಯಿತು. ನನ್ನ ಕಣ್ಣೀರು ನಿಲ್ಲುತ್ತಿರಲಿಲ್ಲ. ನನಗೆ ಸ್ವಲ್ಪವೂ ನಿದ್ದೆ ಬರುತ್ತಿರಲಿಲ್ಲ.

ಬೆಳಿಗ್ಗೆ ಆದಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಅಲಿ ಬಿನ್ ಅಬೂತಾಲಿಬ್(ರ) ಮತ್ತು ಹಝ್ರತ್ ಉಸಾಮ ಬಿನ್ ಝೈದ್‌ರನ್ನು ಕರೆದರು. ದಿವ್ಯವಾಣಿ ಅವತೀರ್ಣವಾಗಲು ತಡವಾದಾಗ, ಅವರಿಬ್ಬರೊಡನೆ ತನ್ನ ಪತ್ನಿಯನ್ನು ಬಿಟ್ಟು ಬಿಡುವುದರ ಬಗ್ಗೆ ಸಲಹೆ ಕೇಳಲು ಬಯಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರೊಂದಿಗೆ ಹಝ್ರತ್ ಆಯಿಶ(ರ)ರ ಸಂಬಂಧವೇನಾಗಿತ್ತು ಎಂದೂ ಹಝ್ರತ್ ಆಯಿಶ(ರ) ಎಷ್ಟು ಸಾತ್ವಿಕ ಮತ್ತು ಪರಿಶುದ್ಧ ಮಹಿಳೆಯಾಗಿದ್ದಳು ಎಂದೂ ಅವರ ಬಗ್ಗೆ ಗೊತ್ತಿದ್ದ ಹಝ್ರತ್ ಉಸಾಮ ಹೀಗೆ ಸಲಹೆ ಕೊಟ್ಟರು: ಯಾ ರಸೂಲಲ್ಲಾಹ್, ಅವರು ನಿಮ್ಮ ಪತ್ನಿಯಾಗಿರುವರು. ಅಲ್ಲಾಹನಾಣೆ, ಅವರ ಬಗ್ಗೆ ನಾವು ಒಳಿತಲ್ಲದೇ ಬೇರೇನೂ ಕಂಡಿಲ್ಲ.

ಹಝ್ರತ್ ಅಲಿ ಬಿನ್ ಅಬೂ ತಾಲಿಬ್(ರ) ಹೇಳಿದರು: ಯಾ ರಸೂಲಲ್ಲಾಹ್, ನಿಮಗೆ ಯಾವುದೇ ಸಂಗತಿಯ ಕೊರತೆಯಿಲ್ಲ. ಅವರಲ್ಲದೇ ಅನೇಕ ಬೇರೆ ಮಹಿಳೆಯರು ಇರುವರು. ಆ ಸೇವಕಿಯೊಡನೆ ಕೇಳಿರಿ. ಅವಳು ಸತ್ಯವನ್ನು ಹೇಳುವಳು. ಆಗ ಹಝ್ರತ್ ಪೈಗಂಬರ್(ಸ) ಸೇವಕಿಯಾದ ಬರೀರಳನ್ನು ಕರೆದರು. ಹಝ್ರತ್ ಪೈಗಂಬರ್(ಸ) ಹೀಗೆ ವಿಚಾರಿಸಿದರು, ಎಲೈ ಬರೀರಾ, ಆಯಿಶಾ(ರ)ರಲ್ಲಿ ಅನುಮಾನಾಸ್ಪದವೆಂದು ಪರಿಗಣಿಸಬಹುದಾದ ಯಾವುದನ್ನಾದರೂ ನೀವು ಎಂದಾದರೂ ನೋಡಿದ್ದೀಯ?' ಬರೀರಾ ಹೀಗೆ ಪ್ರತಿಕ್ರಿಯಿಸಿದಳು, 'ನಾನು ಅಂತಹ ಯಾವುದನ್ನೂ ನೋಡಿಲ್ಲ. ನಿಮ್ಮನ್ನು ಸತ್ಯದೊಂದಿಗೆ ಕಳುಹಿಸಿದ ಅಲ್ಲಾಹನ ಮೇಲೆ ನಾನು ಪ್ರಮಾಣ ಮಾಡುತ್ತೇನೆ, ನಾನು ಅವಳ ಬಗ್ಗೆ ಕೆಟ್ಟದ್ದನ್ನು ನೋಡಿಲ್ಲ, ಅವಳು ಚಿಕ್ಕ ವಯಸ್ಸಿನ ಹುಡುಗಿಯಾಗಿರುವಳು. ನಾದಿದ ಗೋದಿಹಿಟ್ಟನ್ನು ಬಿಟ್ಟು ನಿದ್ದೆ ಹೋಗುತ್ತಾಳೆ. ಆಡುಗಳು ಬಂದು ಅದನ್ನು ಸೇವಿಸುತ್ತವೆ. ಅಷ್ಟಕ್ಕೂ ಅಸಡ್ಡೆಯ ಮುಗ್ಧ ಹುಡುಗಿ ಅವಳು. ಇದನ್ನು ಕೇಳಿದ ನಂತರ, ಹಝ್ರತ್ ಪೈಗಂಬರ್(ಸ) ಅದೇ ದಿನ ಅಬ್ದುಲ್ಲಾ ಬಿನ್ ಉಬಯ್ಯ್ ಬಿನ್ ಸಲೂಲ್‌ರ ಕುರಿತು ಏನೂ ಹೇಳುವಂತಿಲ್ಲವೆಂದು ಎದ್ದು ನಿಂತು ಹೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು, 'ಅವನ ಈ ಕೃತ್ಯಕ್ಕೆ ಕೊನೆಗಾಣಿಸುವವರು ನಿಮ್ಮಲ್ಲಿ ಯಾರಾದರೂ ಇದ್ದಾರೆಯೇ? ನನ್ನ ಹೆಂಡತಿಗೆ ಅವನು ತಲುಪಿಸಿದ ನೋವಿನಿಂದ ನನಗೆ ಬಹಳ ದುಃಖ ಉಂಟಾಗಿದೆ. ಅಲ್ಲಾಹನಾಣೆ, ನಾನು ನನ್ನ ಹೆಂಡತಿಯಲ್ಲಿ ಒಳಿತನ್ನು ಹೊರತುಪಡಿಸಿ ಬೇರೇನೂ ಕಂಡಿಲ್ಲ. ಇದಲ್ಲದೆ, ಈ ಸಂಬಂಧದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯನ್ನು ನಾನು ಧರ್ಮನಿಷ್ಠನೆಂದು ಪರಿಗಣಿಸುತ್ತೇನೆ. ಅಂದರೆ ಹಝ್ರತ್ ಆಯಿಶ(ರ)ರನ್ನು ಕಂಡುಹಿಡಿದು ತಂದ ಸಹಾಬಿ). ಅವರು ನನ್ನ ಅನುಪಸ್ಥಿತಿಯಲ್ಲಿ ಎಂದಿಗೂ ನನ್ನ ಮನೆಗೆ ಬಂದಿಲ್ಲ ಮತ್ತು ನಾನು ಇರುವಾಗ ಮಾತ್ರ ಬರುತ್ತಿದ್ದರು. ಹಝ್ರತ್ ಸಅದ್ ಬಿನ್ ಮುಆಧ್ ಎದ್ದುನಿಂತು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಅಲ್ಲಾಹನಾಣೆ, ಸುಳ್ಳಾರೋಪ ಹೊರಿಸಿದವನು ಔಸ್ ಗೋತ್ರದವನಾಗಿದ್ದರೆ ನಾವು ಅವನ ತಲೆಯನ್ನು ಕೊಯ್ಯುವೆವು. ಅವನು ನಮ್ಮ ಸಹೋದರರಲ್ಲಿ ಒಬ್ಬರಾಗಿದ್ದರೆ, ನೀವು ಆಜ್ಞಾಪಿಸುವುದನ್ನು ನಾವು ಮಾಡುವೆವು. ಆಗ ಖಝ್ರಜಿನ ಒಬ್ಬ ಸರದಾರನಾದ ಹಝ್ರತ್ ಸಅದ್ ಬಿನ್ ಉಬಾದ ಎದ್ದುನಿಂತರು. ಅವರು ಒಬ್ಬ ಒಳ್ಳೆಯ ವ್ಯಕ್ತಿಯಾಗಿದ್ದರು. ಆದರೆ ಗೋತ್ರದ ಬಗ್ಗೆ ಇರುವ ಅಭಿಮಾನ ಅವರನ್ನು ಕೋಪಗೊಳಿಸಿತು. ಅವರು ಹೇಳಿದರು: ನೀನು ತಪ್ಪು ಹೇಳುತ್ತಿದ್ದೀಯ. ನೀನು ಅವನನ್ನು ಕೊಲ್ಲಲು ಸಾಧ್ಯವಿಲ್ಲ. ನಿಮಗೆ ಅದರ ಶಕ್ತಿಯೂ ಇಲ್ಲ. ಹೀಗೆ ಗೋತ್ರಗಳ ನಡುವೆ ಗಲಾಟೆಯುಂಟಾಯಿತು. ಹಝ್ರತ್ ಉಸೀದ್ ಬಿನ್ ಹಝೀರ್ ಎದ್ದುನಿಂತು ಹೇಳಿದರು: ನೀನು ತಪ್ಪು ಹೇಳುತ್ತಿದ್ದೀಯ. ಅಲ್ಲಾಹನಾಣೆ, ನಾವು ಅವನನ್ನು ಖಂಡಿತ ಕೊಲ್ಲುವೆವು. ನೀನು ಕಪಟವಿಶ್ವಾಸಿಯಾಗಿದ್ದೀಯ. ನೀನು ಕಪಟವಿಶ್ವಾಸಿಗಳ ಪರವಾಗಿ ಜಗಳವಾಡುತ್ತಿದ್ದೀಯ. ಹೀಗೆ ಎರಡೂ ಗೋತ್ರದವರು ಕೋಪಗೊಂಡರು. ಕೊನೆಗೆ ಜಗಳಮಾಡಲು ತಯಾರಾದರು. ಹಝ್ರತ್ ಪೈಗಂಬರ್(ಸ) ಪ್ರವಚನ ಪೀಠದಲ್ಲಿದ್ದರು. ಹಝ್ರತ್ ಪೈಗಂಬರ್(ಸ) ಕೆಳಗೆ ಇಳಿದರು ಮತ್ತು ಅವರನ್ನು ಸಮಾಧಾನಪಡಿಸಿದರು. ಕೊನೆಗೆ ಅವರು ಸುಮ್ಮನಾದರು. ಹಝ್ರತ್ ಪೈಗಂಬರ್(ಸ) ಸಹ ಮೌನವಾದರು.

ಹಝ್ರತ್ ಆಯಿಶ(ರ) ಹೇಳುತ್ತಾರೆ: ಸತ್ಯಸಂಗತಿ ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾಯಿತು. ಆದರೆ ನಾನು ಪೂರ್ತಿ ದಿವಸ ಅಳುತ್ತಿದ್ದೆ. ನನ್ನ ಕಣ್ಣೀರು ನಿಲ್ಲುತ್ತಿರಲಿಲ್ಲ ಮತ್ತು ನನಗೆ ನಿದ್ದೆ ಕೂಡ ಬರುತ್ತಿರಲಿಲ್ಲ. ನನ್ನ ಹೆತ್ತವರು ನನ್ನ ಬಳಿಗೆ ಬಂದರು. ನಾನು ಎರಡು ರಾತ್ರಿ ಮತ್ತು ಒಂದು ದಿನ ಅತ್ತೆ. ಹೀಗೆ ಅಳುವುದರಿಂದ ನನ್ನ ಕರುಳು ಕರಗಿ ಹೋಗುವುದು ಎಂದು ನಾನು ಭಾವಿಸಿದೆ. ನನ್ನ ಬಳಿ ನನ್ನ ತಂದೆತಾಯಂದಿರು ಇದ್ದರು. ಅದೇ ವೇಳೆ ಅನ್ಸಾರಿ ಮಹಿಳೆಯೊಬ್ಬಳು ಮನೆಯೊಳಗೆ ಬರಲು ಅನುಮತಿ ಕೇಳಿದಳು. ನಾನು ಅನುಮತಿ ಕೊಟ್ಟೆ. ಅವಳು ನನ್ನ ಬಳಿ ಕುಳಿತು ಅಳಲು ಶುರುಮಾಡಿದಳು. ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ಬಂದು ಕುಳಿತುಕೊಂಡರು. ನನ್ನ ಮೇಲೆ ಆರೋಪ ಹೊರಿಸಲಾದ ದಿನದಿಂದ ಅವರು ನನ್ನ ಬಳಿ ಕುಳಿತುಕೊಳ್ಳುತ್ತಿರಲಿಲ್ಲ. ಒಂದು ತಿಂಗಳು ಹೀಗೆಯೇ ಕಳೆದುಹೋಯಿತು. ಈ ಸಂಗತಿಯ ಕುರಿತು ಹಝ್ರತ್ ಪೈಗಂಬರ್(ಸ)ರಿಗೆ ಯಾವುದೇ ದಿವ್ಯವಾಣಿ ಅವತೀರ್ಣವಾಗಿರಲಿಲ್ಲ. ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ನೀನು ನಿರಪರಾಧಿಯಾಗಿದ್ದರೆ ಅಲ್ಲಾಹನು ಖಂಡಿತ ನಿನಗೆ ಇದರಿಂದ ಮುಕ್ತಿ ನೀಡುವನು. ನಿನ್ನಿಂದ ತಪ್ಪಾಗಿದ್ದರೆ ಅಲ್ಲಾಹನೊಡನೆ ಕ್ಷಮಾಪಣೆ ಕೇಳು. ಅವನ ಮುಂದೆ ಪಶ್ಚಾತ್ತಾಪ ಮಾಡು. ಏಕೆಂದರೆ ದಾಸನು ತನ್ನ ತಪ್ಪನ್ನು ಒಪ್ಪುವಾಗ ಮತ್ತು ಸಮ್ಮತಿಸುವಾಗ ಅಲ್ಲಾಹನು ಸಹ ಕಾರುಣ್ಯದಿಂದ ದಾಸನ ಕಡೆಗೆ ಮರಳಿ ಬರುತ್ತಾನೆ.

ಹಝ್ರತ್ ಪೈಗಂಬರ್(ಸ) ತನ್ನ ಮಾತನ್ನು ಮುಗಿಸದಾಗ ನನ್ನ ಕಣ್ಣೀರು ನಿಂತುಹೋಯಿತು. ಒಂದು ಹನಿ ಕಣ್ಣೀರು ಸಹ ಅನಂತರ ಬರಲಿಲ್ಲ. ಹಝ್ರತ್ ಪೈಗಂಬರ್(ಸ)ರಿಗೆ ನನ್ನ ಪರವಾಗಿ ಉತ್ತರಕೊಡಲು ನಾನು ನನ್ನ ತಂದೆಯಾದ ಅಬೂಬಕರ್‌ರೊಡನೆ ಹೇಳಿದೆ. ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ)ರೊಡನೆ ಏನು ಹೇಳಬೇಕೆಂದು ನನಗೆ ಗೊತ್ತಿಲ್ಲ. ಹಝ್ರತ್

ಪೈಗಂಬರ್(ಸ)ರಿಗೆ ನನ್ನ ಪರವಾಗಿ ಉತ್ತರಕೊಡಲು ನಾನು ನನ್ನ ತಾಯಿಯೊಡನೆ ಹೇಳಿದೆ. ನನ್ನ ತಾಯಿ ಹೇಳಿದಳು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ)ರೊಡನೆ ಏನು ಹೇಳಬೇಕೆಂದು ನನಗೆ ಗೊತ್ತಿಲ್ಲ. ಹಝ್ರತ್ ಆಯಿಶ(ರ) ಹೇಳುತ್ತಾರೆ: ನಾನು ಕಿರಿವಯಸ್ಸಿನ ಹುಡುಗಿಯಾಗಿದ್ದೆ. ಪವಿತ್ರ ಖುರ್ಆನಿನ ಬಗ್ಗೆ ಹೆಚ್ಚಿನ ಅರಿವು ಇರಲಿಲ್ಲ. ನಾನು ಹೇಳಿದೆ: ಅಲ್ಲಾಹನಾಣೆ, ಜನರು ಮಾತನಾಡುತ್ತಿರುವುದೇನೆಂದು ನೀವು ಆಲಿಸಿದ್ದೀರಿ. ಅದು ನಿಮ್ಮ ಹೃದಯಗಳಲ್ಲಿ ಬೇರೂರಿದೆ. ನೀವು ಅದನ್ನು ಸರಿಯೆಂದು ಭಾವಿಸಿದ್ದೀರಿ. ನಾನು ನಿಜವಾಗಿಯೂ ನಿರಪರಾಧಿಯೆಂದು ಅಲ್ಲಾಹನು ಬಲ್ಲನು. ಆದರೆ ನಾನು ನಿರಪರಾಧಿಯೆಂದು ಹೇಳಿದರೆ, ನಾನು ಹೇಳುವುದು ಸತ್ಯವೆಂದು ನೀವು ನಂಬಲಾರಿರಿ. ಅದೇ ರೀತಿಯಲ್ಲಿ ನಾನು ನಿರಪರಾಧಿಯಾಗಿರುವೆ ಎಂದು ಅಲ್ಲಾಹನಿಗೆ ಗೊತ್ತಿದ್ದೂ ನಾನು ತಪಿತಸ್ಥಳೆಂದು ನಾನು ಒಪ್ಪಿಕೊಂಡರೆ, ನಾನು ಹೇಳುವುದು ಸತ್ಯವೆಂದು ನೀವು ನಂಬುವಿರಿ.

ಅಲ್ಲಾಹನಾಣೆ, ನನ್ನ ಮತ್ತು ನಿಮ್ಮ ಉದಾಹರಣೆಯು ಯೂಸುಫ್(ಅ)ರ ತಂದೆಯ ಅಂಥದ್ದು ಎಂದು ನಾನು ತಿಳಿಯುತ್ತೇನೆ. ಅವರು ಹೀಗೆ ಹೇಳಿದರು: **ಫಸಬ್ರುನ್ ಜಮೀಲ್ ವಲ್ಲಾಹುಲ್ ಮುಸ್ತಆನು ಅಲಾ ಮಾ ತಸಿಫೂನ್**. ಆದ್ದರಿಂದ ಉತ್ತಮವಾದ ಸಹನೆಯೇ ನನಗೀಗ ಉಚಿತವಾದುದು. ನೀವು ಹೇಳುತ್ತಿರುವ ಮಾತನ್ನು ತಡೆಯಲು ಅಲ್ಲಾಹನಿಂದಲೇ ಸಹಾಯ ಬೇಡಲು ಸಾಧ್ಯ.

ಅನಂತರ ನಾನು ಇನ್ನೊಂದು ಬದಿಗೆ ತಿರುಗಿ ನನ್ನ ಹಾಸಿಗೆಯ ಮೇಲೆ ಕುಳಿತು ಸರ್ವಶಕ್ತನಾದ ಅಲ್ಲಾಹನು ನನ್ನ ಮುಗ್ಧತೆಯನ್ನು ಮತ್ತು ನಾನು ನಿರಪರಾಧಿಯಾಗಿದ್ದೇನೆ ಎಂದು ಬಹಿರಂಗಪಡಿಸಲಿ ಎಂದು ಆಶಿಸುತ್ತಿದ್ದೆ. "ಆದಾಗ್ಯೂ, ಅಲ್ಲಾಹನಾಣೆ, ನನ್ನ ಪರವಾಗಿ ಅಲ್ಲಾಹನು ದಿವ್ಯವಾಣಿ ಅವತೀರ್ಣಗೊಳಿಸುವನು ಎಂದು ನಾನು ಎಂದಿಗೂ ಭಾವಿಸಿರಲಿಲ್ಲ. ನನ್ನ ಬಗ್ಗೆ ಪವಿತ್ರ ಖುರ್ಆನಿನಲ್ಲಿ ದಿವ್ಯವಾಣಿ ಅವತೀರ್ಣವಾಗಲು ನಾನು ಅರ್ಹನೆಂದು ನಾನು ಯೋಚಿಸಿರಲಿಲ್ಲ. ಆದರೆ ಹಝ್ರತ್ ಪೈಗಂಬರ್(ಸ)ರಿಗೆ ನಿದ್ರೆಯಲ್ಲಿ ಅಲ್ಲಾಹನು ಕನಸನ್ನು ತೋರಿಸಿ ನಾನು ನಿರಪರಾಧಿಯಾಗಿದ್ದೇನೆ ಎಂದು ಸಾಬೀತುಪಡಿಸುವನು ಎಂಬ ಪ್ರತೀಕ್ಷೆ ನನಗಿತ್ತು.

ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ) ತಾನು ಕುಳಿತುಕೊಂಡಿದ್ದ ಸ್ಥಳದಲ್ಲೇ ಇದ್ದಾಗ ಮತ್ತು ಮನೆಯವರಲ್ಲಿ ಯಾರೂ ಹೊರಗೆ ಹೋಗಿರಲಿಲ್ಲ. ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ)ರ ಮೇಲೆ ದಿವ್ಯವಾಣಿ ಅವತೀರ್ಣವಾಯಿತು. ದಿವ್ಯವಾಣಿ ಅವತೀರ್ಣವಾಗುವಾಗ ಹಝ್ರತ್ ಪೈಗಂಬರ್(ಸ)ರಿಗೆ ಸಾಮಾನ್ಯವಾಗಿ ಆಗುವ ರೀತಿಯಲ್ಲಿ ಅವರಿಗೆ ಪ್ರಯಾಸಕರವಾದ ಸ್ಥಿತಿಯುಂಟಾಯಿತು. ಚಳಿಯ ದಿನಗಳಲ್ಲೂ ಹಝ್ರತ್ ಪೈಗಂಬರ್(ಸ)ರ ಹಣೆಯಿಂದ ಬೆವರು ಮುತ್ತುಗಳ ಹಾಗೆ ಸುರಿಯುತ್ತಿತ್ತು. ಹಝ್ರತ್ ಪೈಗಂಬರ್(ಸ)ರಿಂದ ಈ ಸ್ಥಿತಿ ಬಿಟ್ಟುಹೋದಾಗ ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಿದ್ದರು ಮತ್ತು ಅವರು ನನ್ನೊಡನೆ ಹೇಳಿದ ಮೊದಲ ಮಾತು ಇದಾಗಿತ್ತು: 'ಓ ಆಯಿಶಾ! ಅಲ್ಲಾಹನು ನಿನ್ನ ಮುಗ್ಧತೆಯನ್ನು ದೃಢಪಡಿಸಿದ್ದಕ್ಕಾಗಿ ಅವನಿಗೆ ಕೃತಜ್ಞತೆಯನ್ನು ಅರ್ಪಿಸು.' ಇದನ್ನು ಕೇಳಿದಾಗ, ನನ್ನ ತಾಯಿ ನನ್ನೊಡನೆ ಹೇಳಿದರು, 'ಎದ್ದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗು.' ಆದರೆ, ನಾನು ಅವರ ಬಳಿಗೆ ಹೋಗುವುದಿಲ್ಲ ಮತ್ತು ನಾನು ಅಲ್ಲಾಹನನ್ನು ಹೊರತುಪಡಿಸಿ ಯಾರಿಗೂ ಕೃತಜ್ಞತೆ ಅರ್ಪಿಸುವುದಿಲ್ಲ ಎಂದು ನಾನು ಹೇಳಿದೆ. ಅಲ್ಲಾಹನು ಹೀಗೆ ದಿವ್ಯವಾಣಿ ಅವತೀರ್ಣಗೊಳಿಸಿದನು: **ಇನ್ನಲ್ಲದೀನ ಜಾಊ ಬಿಲ್ಇಫ್ಕಿ ಉಸ್ಬತನ್ ಮಿನ್ಕುಂ**. ಎಂದರೆ 'ನಿಶ್ಚಯವಾಗಿಯೂ ಆ ಮಹಾ ಸುಳ್ಳನ್ನು ಆರೋಪಿಸಿದವರು ನಿಮ್ಮ ಪೈಕಿಯ ಒಂದು ಗುಂಪಿನವರೇ ಆಗಿದ್ದಾರೆ.

ಮಿಸ್ತಾಹ್ ಬಿನ್ ಉಸಾಸ ಬಡವ್ಯಕ್ತಿಯಾಗಿದ್ದರು. ಹಝ್ರತ್ ಅಬೂಬಕರ್(ರ) ಸಂಬಂಧಿಯಾದ ಕಾರಣದಿಂದ ಅವರಿಗೆ ಖರ್ಚಿಗಾಗಿ ಕೊಡುತ್ತಿದ್ದರು. ನನ್ನ ನಿರಪರಾಧಿತ್ವದ ಬಗ್ಗೆ ಅಲ್ಲಾಹನು ದಿವ್ಯವಾಣಿ ಅವತೀರ್ಣಗೊಳಿಸಿದಾಗ, ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ನಾನು ಮಿಸ್ತಹ್‌ನಿಗೆ ಇನ್ನು ಮುಂದೇ ಎಂದಿಗೂ ಖರ್ಚಿಗೆ ನೀಡುವುದಿಲ್ಲ. ಅನಂತರ ಅಲ್ಲಾಹನು ಹೀಗೆ ದಿವ್ಯವಾಣಿ ಅವತೀರ್ಣಗೊಳಿಸಿದನು: **ವಲಾತಅ್ತಿಲಿ ಊಲುಲ್ ಫಝ್ಲಿ ಮಿನ್ಕುಮ್ ವಸ್ಸಅತಿ ಅಯ್ಯುತು ಊಲಿಲ್ ಖುರ್ಬಾ ವಲ್ ಮಸಾಕೀನ ವಲ್ ಮುಹಾಜಿರೀನ ಫೀ ಸಬೀಲಿಲ್ಲಾಹಿ, ವಲ್ಯಅ್ಫು ವಲ್ಯಸ್ಫಹೂ, ಅಲಾ ತುಹಿಬ್ಬೂನ ಅಯ್ಯುಗ್ಫಿರುಲ್ಲಾಹು ಲಕುಮ್, ವಲ್ಲಾಹು ಗಫೂರುರ್ರಹೀಮ್** (ಅನ್ನೂರ್:23) ಎಂದರೆ, ನಿಮ್ಮ ಪೈಕಿ ಉನ್ನತ ಸ್ಥಾನದಲ್ಲಿರುವವರು ಮತ್ತು ಐಶ್ವರ್ಯವಂತರು ತಮ್ಮ ನಿಕಟ ಸಂಬಂಧಿಕರಿಗೂ ನಿರ್ಗತಿಕರಿಗೂ ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋದವರಿಗೂ ಏನನ್ನೂ ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಬಾರದು. ಅವನು ಕ್ಷಮಿಸಲಿ ಮತ್ತು ಸೈರಿಸಿಕೊಳ್ಳಲಿ. ಅಲ್ಲಾಹನು ನಿಮಗೆ ಕ್ಷಮೆ ನೀಡಬೇಕೆಂದು ನೀವು ಬಯಸುವುದಿಲ್ಲವೇ? ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ.

"ಹಝ್ರತ್ ಅಬುಬಕರ್(ರ) ಹೇಳಿದರು, 'ಅಲ್ಲಾಹನಾಣೆ, ನನ್ನನ್ನು ಅಲ್ಲಾಹನು ಕ್ಷಮಿಸಬೇಕೆಂದು ನಾನು ನಿಜವಾಗಿಯೂ ಬಯಸುತ್ತೇನೆ ಹೀಗೆ, ಅವರು ಮಿಸ್ತಾಹ್‌ರಿಗೆ ಪುನಃ ಖರ್ಚು ನೀಡಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಝೈನಬ್ ಬಿನ್ತ್ ಜಹಶ್‌ರೊಡನೆ ನನ್ನ ಬಗ್ಗೆ ಅವರೊಡನೆ ಅಭಿಪ್ರಾಯವನ್ನು ಕೇಳುತ್ತಿದ್ದರು. ಆಕೆ ಪ್ರತಿಕ್ರಿಯಿಸುತ್ತಾ ಹೀಗೆ ಹೇಳಿದಳು: 'ಓ ಅಲ್ಲಾಹನ ಸಂದೇಶವಾಹಕರೇ! ನಾನು ನನ್ನ ಕಣ್ಣುಗಳು ಮತ್ತು ಕಿವಿಗಳನ್ನು ಸುರಕ್ಷಿತವಾಗಿ ಇರಿಸಲು ಪ್ರಯತ್ನಿಸುತ್ತೇನೆ. ಅಲ್ಲಾಹನಾಣೆ ನಾನು ಅವರಲ್ಲಿ ಒಳಿತನ್ನು ಮಾತ್ರ ಕಂಡಿರುವೆ. (ಸಹೀಹ್ ಬುಖಾರಿ, ಕಿತಾಬುಶ್ಶಹಾದ, ಹದೀಸ್–2661)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಮುನ್ನೆಚ್ಚರಿಕೆ ಮತ್ತು ಶಿಕ್ಷೆಯ ಭವಿಷ್ಯವಾಣಿಗಳನ್ನು ಪಶ್ಚಾತ್ತಾಪ, ಕ್ಷಮೆ, ಪ್ರಾರ್ಥನೆ ಮತ್ತು ದಾನದ ಆಧಾರದ ಮೇಲೆ ದೂರಮಾಡುತ್ತಾನೆ ಮತ್ತು ತಪ್ಪಿಸುತ್ತಾನೆ ಎಂಬುದು ಅಲ್ಲಾಹನ ಗುಣವಾಗಿದೆ. ಆದ್ದರಿಂದ ಅವನು ಮನುಷ್ಯನಿಗೆ ಅದೇ ನೈತಿಕತೆಯನ್ನು ಕಲಿಸಿದನು." ಪವಿತ್ರ ಖುರಾನ್ ಮತ್ತು ಹದೀಸ್‌ನಿಂದ ಸಾಬೀತಾಗಿರುವಂತೆ, ಪೂರ್ಣ ದುರುದ್ದೇಶದಿಂದ, ಕಪಟಿಗಳು ಹಝ್ರತ್ ಆಯಿಶ(ರ)ರ ವಿರುದ್ಧ ಆರೋಪವನ್ನು ಎಸಗಿದಾಗ, ಸರಳ ಸ್ವಭಾವಿಗಳಾದ ಕೆಲವು ಸಹಾಬಿಯರು ಕೂಡ ಅವರೊಂದಿಗೆ ಸೇರಿಕೊಂಡಿದ್ದರು. ಆ ಸಹಾಬಿಯರಲ್ಲಿ ಒಬ್ಬರು ದಿನಕ್ಕೆ ಎರಡು ಬಾರಿ ಹಝ್ರತ್ ಅಬೂಬಕರ್(ರ)ರ ಮನೆಯಿಂದ ಊಟವನ್ನು ಮಾಡುತ್ತಿದ್ದ ಒಬ್ಬರಾಗಿದ್ದರು. ಸುಳ್ಳಾರೋಪದಲ್ಲಿ ಭಾಗಿಯಾಗಿದ್ದ ಕಾರಣದಿಂದ ಈ ದುಷ್ಕೃತ್ಯಕ್ಕೆ ಶಿಕ್ಷೆಯಾಗಿ ಇನ್ನು ಮುಂದೆ ಹಝ್ರತ್ ಮಿಸ್ತಾಹ್‌ರಿಗೆ ಆಹಾರವನ್ನು ನೀಡುವುದಿಲ್ಲ ಎಂದು ಹಝ್ರತ್ ಅಬುಬಕರ್(ರ) ಪ್ರತಿಜ್ಞೆ ಮಾಡಿದ್ದರು. ಆಗ **ವಲ್ಯಅ್ಫು ವಕ್ಯಸ್ಫಹೂ, ಅಲಾ ತುಹಿಬ್ಬೂನ ಅಯ್ಯುಗ್ಫಿರುಲ್ಲಾಹು ಲಕುಮ್, ವಲ್ಲಾಹು ಗಫೂರುರ್ರಹೀಮ್** (ಅನ್ನೂರ್:23) ಎಂಬ ವಚನ ಅವತೀರ್ಣವಾಯಿತು. ಆಗ ಹಝ್ರತ್ ಅಬೂಬಕರ್(ರ) ತಮ್ಮ ಪ್ರತಿಜ್ಞೆಯನ್ನು ಮುರಿದರು ಮತ್ತು ಎಂದಿನಂತೆ ಪುನಃ ಊಟ ನೀಡಲು ಶುರುಮಾಡಿದರು. ಆದ್ದರಿಂದ ಶಿಕ್ಷಾ ರೂಪದಲ್ಲಿ ಅಥವಾ ಮುನ್ನೆಚ್ಚರಿಕೆಯ ರೀತಿಯಲ್ಲಿ ಏನಾದರೂ ಪ್ರತಿಜ್ಞೆ ಮಾಡಿದರೆ ಆ ಪ್ರತಿಜ್ಞೆಯನ್ನು ಮುರಿಯುವುದು ಉತ್ತಮ ನೈತಿಕತೆಯ ಒಂದು ಅಂಶವಾಗಿದೆ ಎಂದು ಇಸ್ಲಾಂ ಹೇಳುತ್ತದೆ. ಉದಾಹರಣೆಗೆ, ಯಾರಾದರೂ ತನ್ನ ಸೇವಕನನ್ನು ಬೂಟಿನಿಂದ ಐವತ್ತು ಬಾರಿ ಹೊಡೆಯುತ್ತೇನೆ ಎಂದು ಪ್ರತಿಜ್ಞೆ ಮಾಡಿದ ನಂತರ, ಆ ಸೇವಕನ ಪಶ್ಚಾತ್ತಾಪ ಮತ್ತು ಕ್ಷಮಾಪನೆ ಕಾರಣದಿಂದ ಅವನನ್ನು ಕ್ಷಮಿಸುವುದು ಇಸ್ಲಾಮಿನ ಸಂಪ್ರದಾಯವಾಗಿದೆ. ಸುನ್ನತಾಗಿದೆ. ಇದು ಅಲ್ಲಾಹನ ಸ್ವಭಾವವನ್ನು ಮನುಷ್ಯನು ತನ್ನಲ್ಲಿ ಅಳವಡಿಸುವಂತಹ ಸಂಗತಿಯಾಗಿದೆ. ಆದರೆ ವಾಗ್ದಾನವನ್ನು ಮುರಿಯುವುದು ಅನುಮತನೀಯವಲ್ಲ. (ಝುಮೀಮ ಬರಾಹೀನೆ ಅಹ್ಮದೀಯ, ಭಾಗ–5, ರೂಹಾನಿ ಖಝಾಈನ್, ಸಂಪುಟ–21, ಪುಟ–181)

ಹೇಗಿದ್ದರೂ ಈಗ ಅಹ್ಝಾಬ್ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತೇನೆ. ಇದು ಹಿಜರಿ 5 ಶವ್ವಾಲ್ ತಿಂಗಳಲ್ಲಿ ನಡೆದಿತ್ತು. ಮಕ್ಕದ ಖುರೈಶಿಗಳು ಮತ್ತು ಮುಸ್ಲಿಮರ ಮಧ್ಯೆ ಇದು ಮೂರನೇ ದೊಡ್ಡ ಯುದ್ಧವಾಗಿತ್ತು. ಇದನ್ನು ಖಂದಕ್ ಯುದ್ಧವೆಂದೂ ಕರೆಯಲಾಗುತ್ತದೆ. ಖುರೈಶಿಗಳು, ಖೈಬರಿನ ಯಹೂದಿಗಳು ಮತ್ತು ಅನೇಕ ಗುಂಪುಗಳು ಒಟ್ಟು ಸೇರಿ ಮದೀನದ ಮೇಲೆ ಆಕ್ರಮಣ ನಡೆಸಲು ಬಂದ ಕಾರಣದಿಂದ ಪವಿತ್ರ ಖುರ್ಆನಿನಲ್ಲಿ ಈ ಯುದ್ಧವನ್ನು ಅಹ್ಝಾಬ್ ಎಂದು ಕರೆಯಲಾಗಿದೆ. ಎಂದರೆ, ಅನೇಕ ಗುಂಪುಗಳು.

ಯಹೂದಿಯರ ಗೋತ್ರವಾದ ಬನೂ ನಝೀರನ್ನು ಹಝ್ರತ್ ಪೈಗಂಬರ್(ಸ) ಮದೀನದಿಂದ ಹೊರಗೆ ಹಾಕಿದಾಗ ಅವರು ಖೈಬರಿಗೆ ಹೋದರು. ಅವರ ಶ್ರೇಷ್ಠ ಮತ್ತು ಆದರಣೀಯರಾದ ಕೆಲವು ವ್ಯಕ್ತಿಗಳು ಮಕ್ಕಕ್ಕೆ ಹೋದರು. ಅವರು ಖುರೈಶಿಗಳನ್ನು ಒಟ್ಟುಗೂಡಿಸಿದರು. ಅವರನ್ನು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಹೋರಾಡಲು ಹುರಿದುಂಬಿಸಿದರು. ಅವರು ಖುರೈಶಿಗಳೊಡನೆ ಒಪ್ಪಂದ ಮಾಡಿಕೊಂಡರು. ಎಲ್ಲರೂ ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಮಾಡಲು ಒಪ್ಪಿದರು. ಅದಕ್ಕಾಗಿ ಅವರು ಒಂದು ಸಮಯದ ವಾಗ್ದಾನವನ್ನು ಮಾಡಿದರು. ಬನೂ ನಝೀರಿನ ಜನರು ಖುರೈಶಿಯರ ಬಳಿಯಿಂದ ಹೊರಟು ಗ಼ತ್ಫಾನ್ ಮತ್ತು ಸಲೀಂ ಗೋತ್ರಗಳ ಬಳಿಗೆ ಹೋದರು. ಅವರೊಂದಿಗೂ ಇದೇ ರೀತಿಯ ಒಡಂಬಡಿಕೆಯನ್ನು ಮಾಡಿಕೊಂಡರು. ಅನಂತರ ಅವರು ಅವರ

ಬಳಿಯಿಂದ ರವಾನೆಯಾದರು. ಖುರೈಶಿಗಳು ತಯಾರಾದರು. ಅವರು ಅನೇಕ ಗೋತ್ರಗಳು ಮತ್ತು ಅವರ ಸಹಾಯಕರಾದ ಅರೇಬಿಯರನ್ನು ಒಟ್ಟುಗೂಡಿಸಿದರು. ಅವರೆಲ್ಲರೂ ಸೇರಿ ನಾಲ್ಕು ಸಾವಿರವಾಯಿತು.

ಈ ಜನರು ಮಕ್ಕದಿಂದ ರವಾನೆಯಾದ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಹಝ್ರತ್ ಪೈಗಂಬರ್(ಸ) ಸಹಾಬಿಯರನ್ನು ಕರೆದರು. ಅವರೊಡನೆ ಶತ್ರುಗಳ ಬಗ್ಗೆ ತಿಳಿಸಿದರು. ಇದರ ಕುರಿತು ಅವರೊಡನೆ ಸಲಹೆ ಕೇಳಿದರು. ಆಗ ಕಂದಕವನ್ನು, ಎಂದರೆ ದೊಡ್ಡ ದೊಡ್ಡ ಹೊಂಡಗಳನ್ನು ಮಾಡಲು ಹಝ್ರತ್ ಸಲ್ಮಾನ್ ಫಾರಸಿ(ರ) ಸಲಹೆ ಕೊಟ್ಟರು. ಈ ಸಲಹೆ ಮುಸ್ಲಿಮರಿಗೆ ಇಷ್ಟವಾಯಿತು. ಪ್ರವಾದಿಯ ಕಾಲದಲ್ಲಿ ಮದೀನದ ಉತ್ತರ ದಿಕ್ಕು ತೆರೆದ ಮೈದಾನವಾಗಿತ್ತು. ಉಳಿದ ಮೂರು ಭಾಗಗಳಲ್ಲಿ ಕಟ್ಟಡಗಳು ಮತ್ತು ತೋಟಗಳು ಇದ್ದುವು. ಅವುಗಳ ಮಾರ್ಗವಾಗಿ ಶತ್ರುಗಳಿಗೆ ದಾಟಲು ಸಾಧ್ಯವಿಲ್ಲ. ಹೀಗೆ ತೆರೆದ ದಿಕ್ಕಿನಲ್ಲಿ ಹೊಂಡಗಳನ್ನು ಮಾಡಿ ಪಟ್ಟಣವನ್ನು ಸಂರಕ್ಷಿಸುವ ತೀರ್ಮಾನವನ್ನು ಮಾಡಲಾಯಿತು.

ಹಝ್ರತ್ ಪೈಗಂಬರ್(ಸ) ಮೂರು ಸಾವಿರ ಮುಸ್ಲಿಮರೊಡನೆ ಸೇರಿ ಕಂದಕವನ್ನು ಅಗೆಯುವ ಕೆಲಸವನ್ನು ಶುರುಮಾಡಿದರು. ಮುಸ್ಲಿಮರ ಆವೇಶ ಮತ್ತು ಧೈರ್ಯ ತುಂಬಿಸಲಿಕ್ಕಾಗಿ ಹಝ್ರತ್ ಪೈಗಂಬರ್(ಸ) ಮುಸ್ಲಿಮರ ಜೊತೆಗೆ ಹೊಂಡವನ್ನು ಅಗೆಯುವ ಕೆಲಸವನ್ನು ಮಾಡುತ್ತಿದ್ದರು. ಒಟ್ಟು 6 ದಿನಗಳಲ್ಲಿ ಹೊಂಡವನ್ನು ಅಗೆಯಲಾಯಿತು. ಈ ಕಂದಕದ ಉದ್ದ ಸುಮಾರು ಮೂರುವರೆ ಮೈಲಾಗಿತ್ತು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ-2, ಪುಟ-50-51, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2017) (ಅಟ್ಲಸ್ ಸೀರತ್ ನಬವಿ, ಪುಟ-278, ದಾರುಸ್ಸಲಾಮ್ 1424)

ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಜೊತೆಜೊತೆಗೆ ಇದ್ದರು. ಕಂದಕವನ್ನು ಅಗೆಯುವಾಗ ಹಝ್ರತ್ ಅಬೂಬಕರ್(ರ) ತನ್ನ ಬಟ್ಟೆಯಿಂದ ಮಣ್ಣನ್ನು ಎತ್ತುತ್ತಿದ್ದರು. ಹೊಂಡದ ಅಗೆಯುವಿಕೆಯ ಕೆಲಸವನ್ನು ನಿಶ್ಚಿತ ಸಮಯದೊಳಗೆ ಬೇಗ ಬೇಗನೇ ಮುಗಿಸಲಿಕ್ಕಾಗಿ ಹಝ್ರತ್ ಅಬೂಬಕರ್(ರ) ಸಹ ಇತರ ಸಹಾಬಿಯರೊಂದಿಗೆ ಸೇರಿಕೊಂಡು ಹೊಂಡವನ್ನು ಅಗೆಯುವ ಕೆಲಸವನ್ನು ಮಾಡುತ್ತಿದ್ದರು. (ಅಲ್ ಖಲೀಫತುಲ್ ಅವ್ವಲ್ ಅಬೂಬಕ್ಕರ್ ಅಸ್ಸಿದ್ದೀಖ್, ದಕ್ತೂರ್ ಅಲಿ ಮುಹಮ್ಮದ್ ಅಸ್ಸಲಾಬಿ, ಪುಟ-65-66, ದಾರುಲ್ ಮಾರಿಫ ಬೈರೂತ್ 2006)

ಕಂದಕದ ಅಗೆಯುವಿಕೆಯಲ್ಲಿ ಯಾವನೇ ಮುಸ್ಲಿಮನು ಹಿಂದುಳಿದು ಇರುತ್ತಿರಲಿಲ್ಲ. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರಿಗೆ ಬಟ್ಟೆ ಸಿಗದಿರುವಾಗ ಅವರು ಬೇಗನೇ ತಮ್ಮ ಬಟ್ಟೆಗಳಲ್ಲಿ ಮಣ್ಣುಗಳನ್ನು ತೆಗೆಯುತ್ತಿದ್ದರು. ಅವರಿಬ್ಬರೂ ಯಾವುದೇ ಕೆಲಸದಲ್ಲಿ ಹಾಗೂ ಯಾತ್ರೆ ಮತ್ತು ಯಾತ್ರೆ ಮಾಡದ ಸಮಯದಲ್ಲಿ ಪರಸ್ಪರ ಬೇರ್ಪಟ್ಟಿರಲಿಲ್ಲ. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-365, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಹಝ್ರತ್ ಪೈಗಂಬರ್(ಸ) ಹೊಂಡದ ಅಗೆಯುವಿಕೆಯ ಕೆಲಸದಲ್ಲಿ ಕಠಿಣ ಪರಿಶ್ರಮಪಟ್ಟರು. ಕೆಲವೊಮ್ಮೆ ಪಿಕ್ಕಾಸು ಬಳಸುತ್ತಿದ್ದರು, ಮತ್ತೆ ಕೆಲವೊಮ್ಮೆ ಬುಟ್ಟಿಯಲ್ಲಿ ಮಣ್ಣುಗಳನ್ನು ಎತ್ತಿಕೊಳ್ಳುತ್ತಿದ್ದರು. ಒಂದು ದಿನ ಹಝ್ರತ್ ಪೈಗಂಬರ್(ಸ)ರಿಗೆ ಬಹಳ ದಣಿವಾದಾಗ, ಆಯಾಸಗೊಂಡಾಗ ಹಝ್ರತ್ ಪೈಗಂಬರ್(ಸ) ಕುಳಿತುಕೊಂಡರು. ತನ್ನ ಬಲಗಡೆಯಿಂದ ಒಂದು ಕಲ್ಲಿನ ಆಸರೆ ಪಡೆದರು. ಆಗ ಹಝ್ರತ್ ಪೈಗಂಬರ್(ಸ)ರಿಗೆ ನಿದ್ದೆಬಂತು. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರ ತಲೆಯ ಬಳಿ ನಿಂತುಕೊಂಡು ಜನರನ್ನು ಹಝ್ರತ್ ಪೈಗಂಬರ್(ಸ)ರ ಬಳಿಯಿಂದ ದಾಟುವುದರಿಂದ ತಡೆಯುತ್ತಿದ್ದರು. ಜನರು ಹಝ್ರತ್ ಪೈಗಂಬರ್(ಸ) ಎಚ್ಚರಗೊಳಿಸದಿರಲು ಅವರು ಹೀಗೆ ಮಾಡುತ್ತಿದ್ದರು. (ಸಬ್ಲುಲ್ ಹುದಾ ವರ್‍ರಶ್ಶಾದ್, ಸಂಪುಟ-4, ಪುಟ-367, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1993)

ಖುರೈಶಿಗಳು ಮತ್ತು ಅವರ ಸಹಾಯಕರ 10 ಸಾವಿರ ಸೈನಿಕರು ಮದೀನದ ಮುಸ್ಲಿಮರನ್ನು ಸುತ್ತುವರೆದಾಗ, ಈ ಮುತ್ತಿಗೆಯ ಕಾಲದಲ್ಲಿ ಹಝ್ರತ್ ಅಬೂಬಕರ್(ರ) ಮುಸ್ಲಿಮರ ಸೈನ್ಯದ ಒಂದು ಭಾಗದ ನೇತೃತ್ವ ವಹಿಸುತ್ತಿದ್ದರು. ಹಝ್ರತ್ ಅಬೂಬಕರ್(ರ) ನೇತೃತ್ವ ವಹಿಸಿದ ಈ ಜಾಗದಲ್ಲಿ ಅನಂತರ ಒಂದು ಮಸೀದಿಯನ್ನು ನಿರ್ಮಿಸಲಾಗಿತ್ತು ಅದನ್ನು ಸಿದೀಖ್ ಮಸ್ಜಿದ್ ಎಂದು ಕರೆಯಲಾಗುತ್ತಿತ್ತು.
(ಸಯ್ಯದುನಾ ಸಿದ್ದೀಖೆ ಅಕ್ಬರ್(ರ), ಅಲ್‌ಹಾಜ್ ಹಕೀಮ್ ಗುಲಾಮ್ ನಬಿ, ಪುಟ-41, ಆರ್.ಆರ್. ಪ್ರಿಂಟರ್ಸ್ ಲಾಹೋರ್ 2010)

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್. ಈಗ ನಾನು ಕೆಲವು ದಿವಂಗತರ ಬಗ್ಗೆಯೂ ಪ್ರಸ್ತಾಪಿಸುವೆನು. ಅವರಲ್ಲಿ ಮೊದಲ ಪ್ರಸ್ತಾಪ ಮುಖ್ತಾರ್ ಅಹ್ಮದ್ ಗೋಂದಲ್ ಸಾಹಿಬ್‌ರ ಪತ್ನಿ ಸನ್ಮಾನ್ಯ ಮುಬಾರಕ ಬೇಗಂ ಸಾಹಿಬರದ್ದಾಗಿದೆ. ಜನವರಿ 11ರಂದು 93ನೇ ವಯಸ್ಸಿನಲ್ಲಿ ಅವರು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾದ ಹಝ್ರತ್ ಚೌಧರಿ ಗುಲಾಂ ಮುಹಮ್ಮದ್ ಗೋಂದಲ್ ಸಾಹಿಬ್‌ರ ಸೊಸೆಯಾಗಿದ್ದರು. ಜಮಾಅತಿನ ಸೇವೆ ಬಹಳ ಆಸಕ್ತಿಯಿಂದ ಮಾಡುತ್ತಿದ್ದರು. ತನ್ನ ಗ್ರಾಮವಾದ ಚಕ್‌ನಿನ್ನಾನವೆ ಶುಮಾಲಿಯ ಸದರ್ ಲಜ್ನ ಸಹ ಆಗಿದ್ದರು. ನಮಾಝ್ ಮತ್ತು ಉಪವಾಸದ ಪಾಲನೆ ಮಾಡುವ, ಸಾತ್ವಿಕ, ಬಡವರ ಸೇವೆ ಮಾಡುವ, ನಿಷ್ಠಾವಂತ ಮಹಿಳೆಯಾಗಿದ್ದಳು. ಜೀವಿತಪೂರ್ತಿ ಮಕ್ಕಳಿಗೂ ಮತ್ತು ದೊಡ್ಡವರಿಗೂ ಪವಿತ್ರ ಖುರ್‌ಆನ್ ಕಲಿಸುವ ಸೌಭಾಗ್ಯ ಪಡೆದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಐವರು ಪುತ್ರರನ್ನು ಮತ್ತು ಮೂವರು ಪುತ್ರಿಯರನ್ನು ಅಗಲಿರುವರು. ಸಿರಲಿಯೋನಿನ ಮುಬಲ್ಲಿಗ್‌ರಾದ ಇಫ್ತಿಖಾರ್ ಅಹ್ಮದ್ ಗೋಂದಲ್ ಸಾಹಿಬ್‌ರ ತಾಯಿ ಮತ್ತು ಮುಬಲ್ಲಿಗ್ ಫುಆದ್ ಅಹ್ಮದ್ ಸಾಹಿಬ್‌ರ ಅಜ್ಜಿಯೂ ಆಗಿದ್ದರು. ಇದಲ್ಲದೇ ಅವರ ಕುಟುಂಬದಲ್ಲಿ ಮೊಮ್ಮಕ್ಕಳಲ್ಲಿ ಬೇರೆಯೂ ಮುಬಲ್ಲಿಗ್‌ರು ಮತ್ತು ವಖ್ಫೇ ಝಿಂದಗಿಯರು ಇರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ದುಆಗಳು ಅವರ ಸಂತಾನಗಳಿಗಾಗಿ ಸ್ವೀಕರಿಸಲ್ಪಡಲಿ.

ಎರಡನೇ ಜನಾಝ ಮೀರ್ ಅಬ್ದುಲ್‌ವಹೀದ್ ಸಾಹಿಬ್‌ರದ್ದಾಗಿದೆ. ಅವರು ಜನವರಿ 12, 13ರ ಮಧ್ಯೆ ರಾತ್ರಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ 58 ವಯಸ್ಸಿತ್ತು. ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರ ತಂದೆಯಾದ ಮೀರ್ ಅಹ್ಮದ್ ದೀನ್ ಸಾಹಿಬ್‌ರ ಮೂಲಕ ಪ್ರವೇಶಿಸಿತು. ಅವರು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರ ಕಾಲದಲ್ಲಿ 1911ರಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಅವರ ಕುಟುಂಬದಲ್ಲಿ ಒಬ್ಬರೇ ಅಹ್ಮದಿಯಾಗಿದ್ದರು. ಈ ರೀತಿಯಾಗಿ ತಾಯಿಯ ಕುಟುಂಬದ ಕಡೆಯಿಂದ ಅವರ ತಾತರಾದ ಹಝ್ರತ್ ಶೇಖ್ ಅಲ್ಲಾಹ್ ಬಕ್ಷ್ ಸಾಹಿಬ್‌ರ ಮೂಲಕ ಅಹ್ಮದಿಯ್ಯತ್ ಪ್ರವೇಶಿಸಿತು. ಅಬ್ದುಲ್ಲಾಹ್ ಸಾಹಿಬ್‌ರ ತಾತರ ಹೆಸರು ಅಬ್ದುಲ್‌ಕರೀಂ ಸಾಹಿಬ್ ಎಂದಾಗಿತ್ತು. ಅವರಿಗೆ ತಬ್ಲೀಗ್ ಮಾಡುವ ಬಹಳ ಆಸಕ್ತಿ ಇತ್ತು. ಆದ್ದರಿಂದ ಅವರ ತಾತ ಪಿಶಾವರಿನಲ್ಲಿ ಮೌಲವಿ ಅಬ್ದುಲ್‌ಕರೀಂ ಸಾಹಿಬ್ ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದರು. ಬಹಳವಾಗಿ ಪುಸ್ತಕಗಳನ್ನು ಓದುತ್ತಿದ್ದರು. ತನ್ನ ವೈಯಕ್ತಿಕ ಲೈಬ್ರರಿಯನ್ನು ಮಾಡಿದ್ದರು. 1974ರಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್)ರ ನೇತೃತ್ವದಲ್ಲಿ ಅಸೆಂಬ್ಲಿಗೆ ಸಂಘ ಹೋಗುತ್ತಿದ್ದ ಕಾಲದಲ್ಲಿ ಕೆಲವು ಅಪೂರ್ವ ಪುಸ್ತಕಗಳ ಆವಶ್ಯಕತೆಗಳಿದ್ದುವು. ಅವು ಅವರ ಲೈಬ್ರರಿಯಿಂದ ಲಭಿಸಿದ್ದುವು. ಇದನ್ನು ಅವರ ಅಳಿಯ ಹೇಳಿರುವರು. 2020, ಸೆಪ್ಟಂಬರ್ 9ರಂದು ಪ್ರವಾದಿ ನಿಂದನೆಯ ಸುಳ್ಳಾರೋಪದ ಕಾರಣದಿಂದ ಸೆಕ್ಷನ್ 295ರ ಅಡಿಯಲ್ಲಿ ಮೀರ್ ಅಬ್ದುಲ್‌ವಹೀದ್‌ರ ಕುಟುಂಬದ ವಿರುದ್ಧ ಮೊಕದ್ದಮೆ ಹೂಡಲಾಗಿತ್ತು. ಮುಲ್ಲಾಗಳು ಮತ್ತು ಜನಸಾಮಾನ್ಯರು ಅವರ ಮನೆಯನ್ನು ಸುತ್ತುವರೆದರು. ಆದರೆ ಪೊಲೀಸರು ಹೇಗೋ ಅವರನ್ನು ಅಲ್ಲಿಂದ ಹೊರತೆಗೆದು ರಾವಲ್ಪಿಂಡಿಗೆ ತಲುಪಿಸಿದರು. ಕೆಲವು ದಿನಗಳ ನಂತರ ರಾವಲ್ಪಿಂಡಿಯಿಂದಲೇ ಅವರ ಮನೆಗೆ ರಾತ್ರಿ ಸಮಯದಲ್ಲಿ ಪ್ರವೇಶಿಸಿ ಅವರ ಮಗನಾದ ಅಬ್ದುಲ್ ಮಜೀದ್ ಸಾಹಿಬ್‌ರನ್ನು ಪೊಲೀಸರು ಬಂಧಿಸಿದರು.

ಅಲ್ಲಾಹನು ಮೀರ್ ಅಬ್ದುಲ್ ವಹೀದ್ ಸಾಹಿಬ್‌ರಿಗೆ ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ದಯಪಾಲಿಸಿದ್ದನು. ಈಗ ಪ್ರಸ್ತಾಪಿಸಲಾದ ಮಗನಾದ ಅಬ್ದುಲ್ ಮಜೀದ್ ಸಾಹಿಬ್‌ರನ್ನು ಬಂಧಿಸಲಾಗಿತ್ತು. ಈಗಲೂ ಅವರು ಅಲ್ಲಾಹನ ಮಾರ್ಗದಲ್ಲಿ ಸೆರೆಯಲ್ಲಿದ್ದಾರೆ. ಅವರು ಜೈಲಿನಲ್ಲಿ ಇರುವಾಗಲೇ ಅವರ ತಂದೆಯ ನಿಧನವಾಗಿದೆ. ಆದ್ದರಿಂದ ಜನಾಝದಲ್ಲಿ ಭಾಗಿಯಾಗಲು ಅವರಿಗೆ ಸಾಧ್ಯವಾಗಲಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಸಂಬಂಧಿಕರಿಗೆ ಸಹನೆ ಮತ್ತು ಧೈರ್ಯವನ್ನು ನೀಡಲಿ. 20 ವರ್ಷ ಪ್ರಾಯದ ಅವರ ಮಗನ ಬಿಡುಗಡೆಯ ಏರ್ಪಾಡನ್ನು ಅಲ್ಲಾಹನು ಬೇಗನೇ ಮಾಡಲಿ.

ಮೂರನೇ ಜನಾಝ ಅಮೇರಿಕದ ಸನ್ಮಾನ್ಯ ಸಯ್ಯದ್ ವಖಾರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಜನವರಿ 17ರಂದು 58ನೇ ವಯಸ್ಸಿನಲ್ಲಿ ಹೃದಯಾಘಾತದ ನಿಮಿತ್ತ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಪತ್ನಿ ಹಝ್ರತ್ ಮಿರ್ಝಾ ಬಶೀರ್

ಅಹ್ಮದ್ ಸಾಹಿಬ್‌ರ ಮೊಮ್ಮಗಳ ಮಗಳಾಗಿದ್ದರು ಹಾಗೂ ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್‌ರ ಮೊಮ್ಮಗಳ ಮಗಳಾಗಿದ್ದರು. ಈ ರೀತಿಯಾಗಿ ಅವರ ಸಂಬಂಧ ಹಝ್ರತ್ ಮಸೀಹ್ ಮೌಊದ್(ಅ)ರ ಕುಟುಂಬದೊಂದಿಗೆ ಇದೆ. ಅವರ ವಿವಾಹ ಶಾಹ್ ಸಾಹಿಬ್‌ರ ಕುಟುಂಬದಲ್ಲಿ ನಡೆದಿತ್ತು.

ಅವರ ಪತ್ನಿಯಾದ ಶಾಝಿಯ ಖಾನ್ ಸಾಹಿಬ ಹೇಳುತ್ತಾರೆ: ಈ ವೈವಾಹಿಕ ಸಂಬಂಧದ ವಿಷಯವಾಗಿ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ನನ್ನೊಡನೆ ದುಆ ಮಾಡಲು ಹೇಳಿದ್ದರು. ದುಆ ಮಾಡಿದ ನಂತರ ನಾನು ಸಮ್ಮತಿ ಹೇಳಿದೆ. ಆಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್) ಈ ವಿವಾಹ ಸಂಬಂಧವನ್ನು ಮಂಜೂರು ಮಾಡಿದರು. ಎಂದರೆ ಈ ವೈವಾಹಿಕ ಸಂಬಂಧವನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಮಾಡಿಸಿದ್ದರು. ಪತ್ನಿ ಬರೆಯುತ್ತಾಳೆ: 33 ವರ್ಷದ ವೈವಾಹಿಕ ಜೀವಿತದಲ್ಲಿ ಅವರು ನನ್ನ ಬೆರಳನ್ನು ಹಿಡಿದುಕೊಂಡು ನನ್ನನ್ನು ನಡೆಸಿದರು. ಎಂದರೆ ಪ್ರತಿಯೊಂದು ಆವಶ್ಯಕತೆ ಮತ್ತು ಅಭಿಲಾಷೆಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಅತುಲ್ಯವಾದ ತಂದೆಯಾಗಿದ್ದರು. ಎಂದಿಗೂ ತನಗಾಗಿ ಏನೂ ಮಾಡಿಲ್ಲ. ಸರಳ ವ್ಯಕ್ತಿಯಾಗಿದ್ದರು. ತನ್ನದಾದ ಯಾವುದೇ ಅಭಿಲಾಷೆ ಇರಲಿಲ್ಲ. ಏನಾದರೂ ಇದ್ದರೂ ಅದನ್ನು ಮನೆಯವರಿಗಾಗಿ ತ್ಯಾಗ ಮಾಡುತ್ತಿದ್ದರು. ನನಗೆ ಅತ್ಯಂತ ಸುಂದರವಾದ ದಿನ ಯಾವುದೆಂದರೆ, ಅವರು ಒಂದು ದಿನ ಯಾರೋ ಒಬ್ಬರೊಡನೆ ಹೀಗೆ ಹೆಮ್ಮೆಯಿಂದ ಹೇಳಿದರು: ನಾನು ಮಸೀದಿಗೆ ಹೋಗುತ್ತೇನೆ ಮತ್ತು ನನ್ನ ಪ್ರತಿಜ್ಞೆಯನ್ನು ಪುನರಾವರ್ತಿಸುತ್ತೇನೆ. ನನಗೆ ಈ ಪ್ರತಿಜ್ಞೆಯನ್ನು ನೆರವೇರಿಸುವುದಕ್ಕಿಂತ ಹೆಚ್ಚು ಮುಖ್ಯ ಬೇರೇನೂ ಅಲ್ಲ. ಈ ಪ್ರತಿಜ್ಞೆಗಾಗಿ ನಾನು ಎಲ್ಲವನ್ನು ತ್ಯಾಗಮಾಡಲು ಸಿದ್ಧನಿದ್ದೇನೆ. ಇದು ಕೇವಲ ಬಾಯಿಮಾತಾಗಿರಲಿಲ್ಲ. ನನಗೂ ಸಹ ಗೊತ್ತಿದೆ. ಒಂದು ಕಠಿಣ ಸತ್ವಪರೀಕ್ಷೆ ಅವರಿಗೆ ಬಂದಿತ್ತು. ಆಗಲೂ ಅವರು ಆ ಪ್ರತಿಜ್ಞೆಯನ್ನು ಮುರಿಯಲಿಲ್ಲ. ಎಂದರೆ, ದೀನಿಗೆ ಧರ್ಮಕ್ಕೆ ಲೌಕಿಕವಾದ ಕಾರ್ಯಗಳಿಗಿಂತ ಪ್ರಾಮುಖ್ಯ ಮತ್ತು ಆದ್ಯತೆ ನೀಡುವೆನು ಎಂಬ ಪ್ರತಿಜ್ಞೆಯನ್ನು ನಿಭಾಯಿಸಿದರು. ಅದನ್ನು ಈಡೇರಿಸಿದರು. ಇದಕ್ಕಾಗಿ ಯಾವುದೇ ಸಂಬಂಧಿಕರ ಪರಿವೆ ಮಾಡಲಿಲ್ಲ. ಖಿಲಾಫತಿನ ಅನುಸರಣೆಯಿಂದ ಎಂದಿಗೂ ತನ್ನ ಹೆಜ್ಜೆಯನ್ನು ಹೊರಗೆ ಇರಿಸಲಿಲ್ಲ.

ಖಲೀಫರಿಂದ ಅವರಿಗೆ ಗೊತ್ತಾಗದೇ ಇರುತ್ತಿದ್ದ ಸಂಗತಿಯನ್ನು ಸಹ ಅವರು ಅನುಸರಿಸುತ್ತಿದ್ದರು. ನಮ್ಮ ಕೆಲಸ ಅನುಸರಿಸುವುದು ಎಂದು ಹೇಳುತ್ತಿದ್ದರು. ಬಹಳ ಕೃತಜ್ಞತೆ ಅರ್ಪಿಸುವ ಸ್ವಭಾವವನ್ನು ಹೊಂದಿದ್ದರು. ಸದಾ ಹೀಗೆ ಮಾಡಲು ಉಪದೇಶಿಸುತ್ತಿದ್ದರು. ಧನತ್ಯಾಗದಲ್ಲಿ ಎಂದಿಗೂ ಹಿಂದೆ ಉಳಿಯುತ್ತಿರಲಿಲ್ಲ.

ಕೆನಡದ ಜಾಮಿಅ ಅಹ್ಮದಿಯದಿಂದ ಶಾಹಿದ್ ಡಿಗ್ರಿ ಪಾಸ್ ಆದ ಅವರ ಮಗನಾದ ಸಯ್ಯದ್ ಆದಿಲ್ ಅಹ್ಮದ್ ಸಾಹಿಬ್‌ರು ಹೇಳುತ್ತಾರೆ: ಅಲ್ಲಾಹನ ಅನುಗ್ರಹದಿಂದ ನನ್ನ ತಂದೆ ಒಬ್ಬ ಸರಳ ನಿಷ್ಠಾವಂತ ವ್ಯಕ್ತಿಯಾಗಿದ್ದರು. ಎಂದಿಗೂ ತನ್ನ ಬಗ್ಗೆ ಚಿಂತಿಸಿರಲಿಲ್ಲ. ಯಾವಾಗಲೂ ಎಲ್ಲ ಮಕ್ಕಳ ಮತ್ತು ತಾಯಿಯ ಆವಶ್ಯಕತೆಗಳ ಬಗ್ಗೆ ಕಾಳಜಿ ವಹಿಸುತ್ತಿದ್ದರು. ಯಾವುದೇ ಒಳ್ಳೆಯ ವಸ್ತುವನ್ನು ತನಗಾಗಿ ತೆಗೆಯುತ್ತಿರಲಿಲ್ಲ. ತನ್ನ ಮೇಲೂ ಖರ್ಚು ಮಾಡಿರಿ ಎಂದು ಅನೇಕ ಬಾರಿ ನೆನಪಿಸಬೇಕಾಗಿ ಬರುತ್ತಿತ್ತು. ಮುರಬ್ಬಿಗಳ ಮತ್ತು ಜಮಾಅತಿನ ವ್ಯವಸ್ಥೆಯನ್ನು ಬಹಳ ಗೌರವಿಸುತ್ತಿದ್ದರು. ಅವರ ಸುಸರ್ ಆದ ಮತ್ತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಮತ್ತು ಹಝ್ರತ್ ನವಾಬ್ ಮುಬಾರಕ ಬೇಗಂ ಸಾಹಿಬ್(ರ)ರ ಮೊಮ್ಮಗರಾದ ಮಹ್ಮೂದ್ ಅಹ್ಮದ್ ಖಾನ್ ಸಾಹಿಬ್‌ರು ಹೇಳುತ್ತಾರೆ: ವಖಾರ್, ಎಂದರೆ ಅವರ ಅಳಿಯ, ಒಬ್ಬ ಅತ್ಯಂತ ಸುಸ್ವಭಾವಿಯಾದ ಮತ್ತು ಅತಿಥಿ ಸತ್ಕಾರಿಯಾದ ವ್ಯಕ್ತಿಯಾಗಿದ್ದರು. ಎಷ್ಟೇ ಅತಿಥಿಗಳು ಬಂದರೂ, ಏನೇ ಆದರೂ, ಅವರೊಂದಿಗೆ ಏನು ಬೇಕಾದರೂ ಹೇಳಿದರೂ ಎಂದಿಗೂ ಅವರು ಮುಖವನ್ನು ಸಿಂಡರಿಸುವುದನ್ನು, ಹುಬ್ಬು ಗಂಟಿಕ್ಕಿ ಅತೃಪ್ತಿಯನ್ನು ತೋರಿಸುವುದನ್ನು ನಾನು ಕಂಡಿಲ್ಲ. ತನ್ನ ಮಗನಾದ ಆದಿಲಿನ ಪರಿವೆಯಿಲ್ಲದ ಜೀವಿತದ ಬಗ್ಗೆ ಪದೇ ಪದೇ ಗದರಿಸುತ್ತಿದ್ದರು. ಆದರೆ ಆದಿಲ್ ವಖ್ಫ್ ಮಾಡಿದಾಗ ಮಗನೊಂದಿಗೆ ವಖಾರಿನ ವರ್ತನೆ ಸಂಪೂರ್ಣವಾಗಿ ಬದಲಾಯಿತು. ಅನಂತರ ಈ ಮಗನೇ ಅವರ ಅತ್ಯಂತ ಪ್ರಿಯ ಮಗನಾದನು. ಅವನನ್ನು ಬಹಳವಾಗಿ ಗೌರವಿಸಲು ಮತ್ತು ಆದರಿಸಲು ತೊಡಗಿದರು.

ಅಬುದಾಬಿಯ ಮಾಜಿ ಅಮೀರ್ ಆಗಿದ್ದ ಮುನೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ವಖಾರ್ ಸಾಹಿಬ್‌ರು ಕುಟುಂಬದೊಂದಿಗೆ ಅಬುದಾಬಿಯಲ್ಲಿ ಉದ್ಯೋಗ ಮಾಡುತ್ತಿದ್ದರು. ನೌಕರಿಯ ಕಾಲದಲ್ಲಿ ಅವರೊಂದಿಗೆ ಕೌಟುಂಬಿಕ ಸಂಬಂಧವುಂಟಾಯಿತು. ಅವರು ಒಬ್ಬ ಪ್ರೊಫೆಶನಲ್ ಆಗಿದ್ದರು. ಬ್ಯಾಂಕಿನಲ್ಲಿ ನೌಕರಿ ಮಾಡುವ ಬ್ಯಾಂಕರ್ ಆಗಿದ್ದರು. ಸರಳ ಸ್ವಭಾವ ಮತ್ತು ಸ್ನೇಹಮಯಿಯಾಗಿ ಇರುವುದು ಅವರ ಗುಣವಿಶೇಷವಾಗಿತ್ತು. ಜಮಾಅತ್ ಮತ್ತು ಜಮಾಅತಿನ ವ್ಯವಸ್ಥೆಯೊಂದಿಗೆ ಆಳವಾದ ಸಂಬಂಧವನ್ನು ಇರಿಸುತ್ತಿದ್ದರು. ಖಿಲಾಫತಿನೊಂದಿಗೆ ಅವರಿಗೆ ಅಪರಿಮಿತವಾದ ಪ್ರೀತಿ ಮತ್ತು ಅನುಸರಣೆಯಿತ್ತು. ಅಮೇರಿಕಗೆ ಹೋಗುವ ವರೆಗೂ ತನ್ನ ವಸತಿಯನ್ನು ತನ್ನ ಮನೆಯನ್ನು ಜಮಾಅತಿನ ಆವಶ್ಯಕತೆಗಳಿಗಾಗಿ ಬಹಳ ಸಂತೋಷದಿಂದ ಸಮರ್ಪಿಸುತ್ತಿದ್ದರು. ಜುಮಾ ಮತ್ತು ಇತರ ಕಾರ್ಯಕ್ರಮಗಳಿಗೆ ಅದು ಉಪಯುಕ್ತವಾಗುತ್ತಿತ್ತು. ಜಮಾಅತಿನ ಇಂಟರ್ನಲ್ ಆಡಿಟರ್ ಎಂಬ ನೆಲೆಯಲ್ಲೂ ಅವರು ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅದೇ ರೀತಿಯಲ್ಲಿ ಸಯ್ಯದ್ ಹಾಶಿಂ ಅಕ್ಬರ್ ಸಾಹಿಬ್‌ರು ಸಹ ಹೀಗೆ ಬರೆದಿರುವರು: ನಾನು ಅವರೊಂದಿಗೆ ಕೆಲಸ ಮಾಡಿದ್ದೇನೆ. ಸದಾ ಎಲ್ಲರನ್ನು ಪ್ರೀತಿಸುವ ಮತ್ತು ಸೃಷ್ಟಿ ಸೇವೆ ಮನುಕುಲದ ಕಲ್ಯಾಣದ ಆವೇಶದಲ್ಲಿ ತುಂಬಿದವರಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಮಕ್ಕಳಿಗೂ ಅವರ ಒಳಿತುಗಳನ್ನು ಮಾಡಲು ಸೌಭಾಗ್ಯ ನೀಡಲಿ. ಅವರು ಅವರ ಮಕ್ಕಳಿಗಾಗಿ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಸ್ವೀಕರಿಸಲಿ. ಎಲ್ಲ ದಿವಂಗತರ ಜನಾಝವನ್ನು ಜುಮಾ ನಮಾಝಿನ ನಂತರ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್.

**************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಲ್ಲ. ಶಕ್ತಿ ಪ್ರದರ್ಶನಕ್ಕಾಗಿ ಹೀಗೆ ಹೇಳಬಹುದು. ಮಗು ಏನಾದರೂ ಜಟ್ಟಿಯಾಗಬಹುದು ಆದರೆ ಜಟ್ಟಿಯು ಮಗುವಿನ ಹಾಗೆ ಆಗಬಹುದು ಎಂದು ಹೇಳಲಾಗದು.

ಈ ಆಕ್ಷೇಪ ಸರಿಯಾದುದು. ಯಾವಾಗವೆಂದರೆ ಈ ವಚನದಲ್ಲಿ ಶಕ್ತಿ ಪ್ರದರ್ಶನ ಉದ್ದೇಶಿಸಿದ್ದಾದರೆ ಸರಿಯಾಗುತಿತ್ತು. ಆದರೆ ಇಲ್ಲಿ ಆ ಉದ್ದೇಶ ಇಲ್ಲವೇ ಇಲ್ಲ. ಅಲ್ಲಾಮ ಝಮ್‌ಖಶರಿ ಈ ಪ್ರಶ್ನೆಯ ಪೈಕಿ ಉತ್ತರ ನೀಡುತ್ತಾ ಹೇಳುತ್ತಾರೆ. ಬಹುದೇವಾರಾಧಕರು ಅಲ್ಲಾಹನ ಗುಣಗಳನ್ನು ಅವನ ಸೃಷ್ಟಿಗಳಿಗೆ ನೀಡಿ ಒಂದು ರೀತಿಯಲ್ಲಿ ಅಲ್ಲಾಹನನ್ನೇ ಒಂದು ಸೃಷ್ಟಿ ಎಂದು ಅರ್ಥ ನೀಡುತ್ತಾರೆ. ಆ ಕಾಋಣದಿಂದ ಅಲ್ಲಾಹನು ಹೇಳಿದನು. ಈ ರೀತಿ ಅಲ್ಲಾಹನ ಮುಂದೆ ಮಿಥ್ಯ ದೇವರುಗಲ ಸ್ಥಾನ ಉನ್ನತವಾಗುವುದಿಲ್ಲ. ಬದಲು ಅಲ್ಲಾಹನ ಸ್ಥಾನವೇ ಕಸಿಯುವಂತಾಗುತ್ತದೆ. ಅಂದ ಹಾಗೆ ಅಲ್ಲಾಹನು ಅವನ ಸೃಷ್ಟಿಗೆ ಸಮಾನವಾಗುವನೇ, ನನ್ನ ದೃಷ್ಟಿಯಲ್ಲಿ ಈ ಉತ್ತರ ಆಕ್ಷೇಪಕ್ಕೆ ತಕ್ಕುದಾದಲ್ಲ.

ನನ್ನ ದೃಷ್ಟಿಯಲ್ಲಿ ಈ ಪ್ರಶ್ನೆಯ ಉತ್ತರ ಯಾವ ರೀತಿಯಲ್ಲಿ ಸರಿಯಾಗಿ ಜೋಡಿಸಲಾಗಿದೆ ಎಂದರೆ ಅದನ್ನು ನಾನು ಹಿಂದಿನ ವಚನಗಳಲಿ ವಿವರಿಸಿದ್ದೇನೆ. ಅಸಲು ವಿಷಯ ನಾನು ಹೇಳಿದಂತೆ ಏನಾಗಿತ್ತೆಂದರೆ ಅಲ್ಲಾಹನಿಗೆ ದಿವ್ಯವಾಣಿ ಕಳುಹಿಸುವ ಅವಶ್ಯಕತೆ ಇದೆಯೇ? ಬಹುದೇವಾರಾಧಕರು ತಮ್ಮ ಆರಾಧ್ಯರ ಪೈಕಿ ದಿವ್ಯವಾಣಿ ಪ್ರಕಟಗೊಳಿಸುವುದು ಅವರ ಘನತೆಗೆ ವಿರುದ್ಧವಾಗಿದೆ ಎನ್ನುತ್ತಾರೆ. ಅಲ್ಲಾಹನು ಹೇಳುವನು. ಹಾಗಲ್ಲ ಅವರು ಹಾಗೆ ಮಾಡಲು ಶಕ್ತರಲ್ಲ. ಅವರು ಯಾವ ಲೌಕಿಕ ಅನುಗ್ರಹ ಆಗಲಿ, ಮನುಷ್ಯನಿಗೆ ನೀಡಿಲ್ಲ. ಆಧ್ಯಾತ್ಮಿಕ ಅನುಗ್ರಹ ನೀಡಲೂ ಅವರು ಶಕ್ತರಲ್ಲ. ಹೀಗಿರುವಾಗ ಅಲ್ಲಾಹನು ಸಹ ಅವರಂತೆ ಆಗಿರುವನು ಎಂದು ನೀವು ಹೇಗೆ ಭಾವಿಸುತ್ತೀರಿ? ಅದಾಗ್ಯೂ ಅವನು ದಿವ್ಯವಾಣಿ ನೀಡಲು ಶಕ್ತನಾಗುತ್ತಾನೆ. ಹಾಗೆಯೇ ಅವನು ಲೌಕಿಕ ಅನುಗ್ರಹ ನೀಡಿದಂತೆ ಆಧ್ಯಾತ್ಮಿಕ ಅನುಗ್ರಹಗಳನ್ನು ಸಹ ನೀಡಬಲ್ಲನು. ನೀವು ನಿಮ್ಮ ಕಾಲ್ಪನಿಕ ಆರಾಧಕರ ಹಾಗೆ ವಿವಶನಾಗಿರಲು ಬಯಸುವಿರಾ. ಆದರೆ ಅವನು ಜೀವಂತ ದೇವರಾಗಿದ್ದಾನೆ ಮತ್ತು ಸರ್ವಶಕ್ತನಾಗಿದ್ದಾನೆ. ಅವನು ಲೌಕಿಕ ಪ್ರಗತಿಗೋಸ್ಕರ ಸಾವಿರಾರು ರೀತಿಯ ಸಾಮಾಗ್ರಿಗಳನ್ನು ಅನುಗ್ರಹಿಸಿದ್ದಾನೆ. ಅಂದ ಹಾಗೆ ಅವನು ನಿಮ್ಮ ಆರಾಧಕರ ಹಾಗೆ ಆಧ್ಯಾತ್ಮಿಕ ಪ್ರಗತಿ ನೀಡಲು ಏಕೆ ಹಿಂಜರಿಯುವನು. ನಿಮ್ಮ ಆರಾಧ್ಯರು ಹೀಗೆ ಮಾಡದಿರಲು ಗೌರವದ ಸಂಕೇತವಲ್ಲ. ಬದಲು ವಿವಶತೆಯ ಕಾರಣವಾಗಿದೆ. ಅಲ್ಲಾಹನು ಅಪಾಂಗನಲ್ಲ. ಆದುದರಿಂದ ಅವನು ಮಾತನಾಡಬಲ್ಲನು. ಮಾತನಾಡುತ್ತಾನೆ ಮತ್ತು ಮಾತನಾಡುತ್ತಿರುವನು. ಅಂದ ಹಾಗೆ ಹಿಂದಿನ ವಚನಗಳಲ್ಲಿ ಅದೇ ಅರ್ಥವನ್ನು ಕಲ್ಪಿಸಲಾಗಿದೆ.

ಅಂದರೆ ಅಲ್ಲಾಹನ ಅನುಗ್ರಹಗಳನ್ನು ಎಣಿಕೆ ಮಾಡಲು ನೀವು ಪ್ರಯತ್ನಿಸಿದರೆ ಅವನ್ನೆಲ್ಲ ಲೆಕ್ಕ ಹಾಕಲು ನಿಮ್ಮಿಂದ ಸಾಧ್ಯವಿಲ್ಲ. ಅಂದ ಮೇಲೆ ಲೌಕಿಕ ಅನುಗ್ರಹಗಳನ್ನು ನೀಡಿದವನು ಆಧ್ಯಾತ್ಮಿಕ ಅನುಗ್ರಹಗಳನ್ನು ನೀಡದಿರಲು ಹೇಗೆ ಸಾಧ್ಯ? ಅವನು ಮೂಕನಾಗಿ ಕುಳಿತುಕೊಳ್ಳಬಹುದೇ?

ಮತ್ತೆ ಹೇಳಿದನು. ಅವನು ಕ್ಷಮಾಶೀಲನೂ ಕಾರುಣ್ಯವಂತನಾಗಿಯೂ ಆಗಿರುವನು. ಅವನು ಮಾರ್ಗದರ್ಶ ನೀಡದೇ ಹೊದರೆ ದೌರ್ಬಲ್ಯಗಳ

ಕ್ಷಮೆ ಮತ್ತು ಅರ್ಹ ಜನರ ಗೌರವಕ್ಕೆ ಬೇಕಾದ ಸಾಮಾಗ್ರಿಗಳು ಹೇಗೆ ಒದಗಿ ಬರಲು ಸಾಧ್ಯ? ಅವನು ಮಾರ್ಗದರ್ಶನ ನೀಡಲು ಹಿಂಜರಿಕೆ ತೋರಿಸಿದರೆ ಅವನ ಕ್ಷಮಾಶೀಲತೆ ಮತ್ತು ಕರುಣೆಯ ಗುಣ ನಶಿಸಿಹೋಗುವುದು. ಆದುದರಿಂದ ಅವನು ಹೀಗೆ ಮಾಡಲು ಸಾಧ್ಯವಿಲ್ಲ.

**(ತಫ್ಸೀರ್ ಕಬೀರ್ ಸಂ 4, ಪುಟ 148, ಮುದ್ರಣ 2010 ಖಾದಿಯಾನ್).**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ದೊರೆಯುವುದು. ನಾನು ನಿನಗೆ ಗೌರವ ನೀಡುವೆನು ಮತ್ತು ನಿನ್ನನ್ನು ರಕ್ಷಿಸುವೆನು. ನಿನ್ನ ಮೇಲೆ ನನ್ನೆಲ್ಲ ಅನುಗ್ರಹಗಳಿವೆ. ಜನರೊಡನೆ ಹೇಳು. ನೀವು ಅಲ್ಲಾಹನೊಡನೆ ಪ್ರೀತಿಸ ಬಯಸುವಿರಾದರೆ ಬನ್ನಿ, ನನ್ನನ್ನು ಅನುಸರಿಸಿರಿ. ಆಗ ಅಲ್ಲಾಹನು ಸಹ ನಿಮ್ಮನ್ನು ಪ್ರೀತಿಸುವನು. ನೀನು ನನ್ನ ನಯನಗಳ ಮುಂದಿರುವೆ. ನಾನು ನಿನ್ನ ಹೆಸರು ಮುತವಕ್ಕಿಲ್ (ಭರವಸೆ ಹೊಂದಿದವನು) ಎಂದು ಇಟ್ಟಿರುವೆನು. ಅಲ್ಲಾಹನು ಆಕಾಶದಿಂದ ನಿನ್ನನ್ನು ಕೊಂಡಾಡುವನು. ನಾವು ನಿನ್ನ ಗುಣಗಾನ ಮಾಡುವೆವು ಮತ್ತು ನಿನ್ನ ಮೇಲೆ ದುರೂದ್ ಕಳುಹಿಸುವೆವು. ಜನರು ಈ ಪ್ರಕಾಶವನ್ನು ಆರಿಸಬಯಸುವರು. ಆದರೆ ಅಲ್ಲಾಹನು ಈ ಪ್ರಕಾಶವನ್ನು (ಅದು ಅವನ ಪ್ರಕಾಶವಾಗಿದೆ) ಪರಿಪೂರ್ಣತೆಗೆ ತಲುಪಿಸುವನು. ನಾವು ಅವರ ಹೃದಯ ಮೇಲೆ ಭಯ ಹುಟ್ಟಿಸುವೆವು. ನನ್ನ ವಿಜಯ ಬರುವುದು. ಕಾಲದ ವ್ಯವಹಾರಗಳು ನಮ್ಮ ಮೇಲೆ ಅಂತ್ಯಗೊಳ್ಳುವುದು. ಆ ದಿನ ಹೇಳಲಾಗುವುದು. ಇದು ಸತ್ಯವಾಗಿರಲಿಲ್ಲವೇ. ನಾನು ನಿನ್ನ ಜೊತೆಗಿರುವೆ ನೀನು ಎಲ್ಲಿದ್ದರೂ ಸರಿ. ಎಲ್ಲಿ ನಿನ್ನ ಮುಖ ಇರುವುದೋ ಅಲ್ಲಿ ನನ್ನ ಮುಖವಿರುವುದು. ನಿನ್ನೊಡನೆ ಬೈಅತ್ ಮಾಡುವುದೆಂದರೆ ನನ್ನೊಡನೆ ಬೈಅತ್ ಮಾಡಿದಂತೆ, ನಿನ್ನ ಕೈ ನನ್ನ ಕೈಯಾಗಿದೆ. ಜನರು ದೂರದಿಂದ ನಿನ್ನ ಬಳಿ ಬರುವರು. ಅಲ್ಲಾಹನ ನೆರವು ನಿನಗೆ ದೊರೆಯುವುದು. ನಿನಗಾಗಿ ಜನರು ಅಲ್ಲಾಹನಿಂದ ದಿವ್ಯವಾಣಿ ಪಡೆಯುವರು ಮತ್ತು ನಿನಗೆ ಸಹಾಯ ಮಾಡುವರು. ಅಲ್ಲಾಹನ ಭವಿಷ್ಯವಾಣಿಗಳನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಓ ಅಹ್ಮದ್! ನಿನ್ನ ತುಟಿಗಳ ಮೇಲೆ ಅನುಗ್ರಹ ಜಾರಿ ಮಾಡಲಾಗಿದೆ. ಮತ್ತು ನಿನ್ನ ಗೌರವ ಹೆಚ್ಚಿಸಲಾಗಿದೆ. ಅಲ್ಲಾಹನು ನಿನ್ನ ನ್ಯಾಯಪೂರ್ತಿಕರಣವನ್ನು ಪ್ರಕಾಶಿತಗೊಳಿಸುವನು. ನೀನು ಸಾಹಸಮಮಿ ಆಗಿರುವನು. ವಿಶ್ವಾಸವು ಸುರಯ್ಯಾ (ಕೃತ್ತಿಕ) ನಕ್ಷತ್ರ ಮೇಲಿದ್ದರು. ನೀನು ಪಡೆಯಬಹುದು. ಅಲ್ಲಾಹನ ಅನುಗ್ರಹಗಳ ನಿಧಿಗಳೇ ನಿನಗೆ ಕೊಡಲಾಗಿದೆ. ನಾನು ಉತ್ತರಾಧಿಕಾರಿ ಮಾಡಲು ನಿಶ್ಚಯಿಸಿಕೊಂಡಾಗ ಆದಮನಿಗೆ ಅಂದರೆ ನಿನಗೆ ಜನ್ಮ ನೀಡಿರುವೆನು. ಅಲ್ಲಾಹನು ನಿನ್ನನ್ನು ವರ್ಜಿಸುವುದಿಲ್ಲ ಮತ್ತು ಕೈಬಿಡುವುದಿಲ್ಲ. ಪವಿತ್ರ ಮತ್ತು ಅಪವಿತ್ರಕರನ್ನು ಪ್ರತ್ಯೇಕಗೊಳಿಸುವವರೆ, ನೀನು ನನ್ನಲ್ಲಿ ಮತ್ತು ಎಲ್ಲಾ ಸೃಷ್ಟಿಗಳಲ್ಲಿ ಆಧಾರವಾಗಿರುವನು. ನಾನು ನಿನ್ನಲ್ಲಿ ತನ್ನ ಆತ್ಮವನ್ನು ಹಾಕಿರುವೆನು. ನೀನು ಸಹಾಯ ಪಡೆಯುವೆ, ಯಾರಿಗೂ ಸಹ ನಿನ್ನನ್ನು ಕಡೆಗಣಿಸಲು ಅವಕಾಶ ಇಲ್ಲದಂತಾಗುವುದು. ನಿನ್ನೊಡನೆ ಸತ್ಯದೊಂದಿಗೆ ಅವತರಿಸಿರುವನು. ನಿನ್ನೊಂದಿಗೆ ಪ್ರವಾದಿಗಳ ಭವಿಷ್ಯಗಳು ಪೂರ್ಣಗೊಂಡಿರುವವು. ಅಲ್ಲಾಹನು ತನ್ನ ಧರ್ಮಕ್ಕೆ ಪುನರ್ಜೀತನ ನೀಡಲು ಮತ್ತು ಎಲ್ಲ ಧರ್ಮಗಳ ಮೇಲೆ ವಿಜಯಿಯನ್ನಾಗಿ ಮಾಡಲು ನಿನ್ನನ್ನು ಸಂದೇಶವಾಹಕನನ್ನಾಗಿ ಕಳುಹಿಸಿದ್ದಾನೆ. ಓ ನನ್ನ ಅಹ್ಮದ್ ನೀನು ನನ್ನ ಆಶಯ ಮತ್ತು ನನ್ನ ಜೊತೆಗಾರನಾಗಿದ್ದೆ. ನಾನು ನಿನ್ನ ಸಜ್ಜನಿಕೆಯ ವೃಕ್ಷ ನನ್ನ ಕೈಯಿಂದ ನೆಟ್ಟಿರುವೆನು. ನಾನು ನಿಗೆ ಜನರ ಇಮಾಮನ್ನಾಗಿ ಮಾಡುವೆನು ಮತ್ತು ನಿನಗೆ ಸಹಕರಿಸುವೆನು. ಜನರು ಇದರಿಂದ ಆಶ್ಚರ್ಯದಲ್ಲಿದ್ದರೆಯೆ? ಹೇಳು ಅಲ್ಲಾಹನು ಅದ್ಭುತನು ತಾನು ಬಯಸಿದವರಿಗೆ ಆಯ್ಕೆ ಮಾಡಿಕೊಳ್ಳುವನು. ಅವನು ತನ್ನ ಕಾರ್ಯಗಳ ಬಗ್ಗೆ ಪ್ರಶ್ನಿಸಲ್ಪಡುವವನಲ್ಲ. ಅಲ್ಲಾಹನ ನೆರಳು ನಿನ್ನ ಮೇಲಿರುವುದು ಮತ್ತು ಅವನ ಅಭಯ ನಿನಗಿರುವುದು. ನಿನ್ನಂತಹ ಮತ್ತು ವ್ಯರ್ಥವಾಗಲು ಸಾಧ್ಯವಿಲ್ಲ. ನಾವು ನಿನಗೆ ಜನರಿಗೆ ದೃಷ್ಟಾಂತನನ್ನಾಗಿ ಮಾಡುವೆನು. ಇದು ಆದಿಯಿಂದಲೂ ವಿಧಿಯಾಗಿತ್ತು. ನೀನು ನನ್ನ ಜೊತೆಯಲ್ಲಿರುವೆ. ನಿನ್ನ ರಹಸ್ಯ ನನ್ನ ರಹಸ್ಯವಾಗಿದೆ. ನೀನು ಇಹಪರಗಳಲ್ಲೂ ಪರಿಶುದ್ಧನು ಮತ್ತು ಪ್ರಿಯನಾಗಿರುವೆ. ನಿನ್ನ ಮೇಲೆ ವಿಶೇಷವಾದ ಅನುಗ್ರಹವಿದೆ. ಲೋಕದ ಮೇಲೆಲ್ಲ ನಿನಗೆ ಗೌರವವಿದೆ. ನಾನು ನನ್ನ ಚಮತ್ಕಾರ ತೋರಿಸುವೆನು. ನನ್ನ ಶಕ್ತಿಯಿಂದ ನಿನ್ನನ್ನು ಎತ್ತಿಕೊಳ್ಳುವೆನು. ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರನು ಆಗಮಿಸಿರುವನು. ಲೋಕವು ಅವನನ್ನು ಸ್ವೀಕರಿಸಲಿಲ್ಲ. ಆದರೆ ನಾನು ನಿನ್ನನ್ನು ಸ್ವೀಕರಿಸುವೆನು. ಮತ್ತು ಬಲವಾದ ಆಕ್ರಮಣಗಳಿಂದ ನಿನ್ನ ಸತ್ಯತೆ ದೃಢಪಡಿಸುವೆನು. ನೀನು ನನ್ನ ಜೊತೆಯಲ್ಲಿರುವೆ. ನಿನಗಾಗಿ ಹಗಲಿರುಳು ಸೃಷ್ಟಿಸಿರುವೆನು. ನನ್ನ ಜೊತೆಗಿರುವ ನಿನ್ನ ಸಂಬಂಧ ಸೃಷ್ಟಿಯು ತಿಳಿದಿರುವುದಿಲ್ಲ. ಓ ಜನರೇ ನಿಮ್ಮ ಬಳಿ ಅಲ್ಲಾಹನ ಪ್ರಕಾಶ ಬಂದಿರುತ್ತದೆ. ಆದುದರಿಂದ ನೀವು ಅವನನ್ನು ಧಿಕ್ಕರಿಸಬೇಡಿರಿ. (ಅದೇ ಪುಟ 100-103).

**ಅಲ್ಲಾಹನ ಆತ್ಮ ನನ್ನನ್ನು ಆವರಿಸಿಕೊಂಡಿದೆ. ನನ್ನ ಶರೀರದ ಮೇಲೆಯೂ ಆವರಿಸಿಕೊಂಡು ತನ್ನ ಅಸ್ತಿತ್ವದಲ್ಲಿ ನನಗೆ ಶರಣು ನೀಡಿರುವನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮಾದರಿ ರೂಪದಲ್ಲಿ ಮೇಲ್ಕಾಣಿಸಿದ ದಿವ್ಯವಾಣಿಗಳನ್ನು ವಿವರಿಸಿದ ನಂತರ ತನ್ನ ಒಂದು ಮಹೋನ್ನತವಾದ ದಿವ್ಯ ಸ್ವಪ್ನವು ಸಹ ವಿವರಿಸಿದರು. ಈ ದಿವ್ಯ ಸ್ವಪ್ನದ ಅಂತ್ಯವು ಸಹ ಮಹೋನ್ನತದ ದಿವ್ಯವಾಣಿಯ ಜೊತೆಯಾಗುತ್ತದೆ. ಅಂದಹಾಗೆ ಅಂತಹ ಮಹೋನ್ನತವಾದ ದಿವ್ಯವಾಣಿಗಳ ಮತ್ತು ದಿವ್ಯಸ್ವಪ್ನಗಳ ನಂತರವು ಸಹ ಅವರಿಗೆ ದೇವನಾಗುವ ದಾವೆ ಹೂಡಲು ಯಾವುದೆ ಕಾರಣವಿಲ್ಲ ಎಂದಾದರೆ ಮಸೀಹನ ಅತ್ಯಲ್ಪ ದಿವ್ಯವಾಣಿಗಳಿಂದ ದೇವನಾಗುವ ವಾದ ಹೇಗೆ ಸಮರ್ಥಿಸಲು ಸಾಧ್ಯ?

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಒಂದು ಸ್ವಪ್ನದಲ್ಲಿ ನೋಡಿದರು. ನಾನು ಸ್ವಯಂ ದೇವನಾಗಿದ್ದೇನೆ. ದೃಢವಾಗಿ ಅದು ನಾನೇ ಎಂದು ನಂಬಿರುತ್ತೇನೆ. ಅದರಲ್ಲಿ ನನ್ನ ಇರಾದೆ ಯಾವುದಿಲ್ಲ. ಯಾವ ಭಾವನೆ ಇಲ್ಲ ಮತ್ತು ಯಾವ ಕರ್ಮವು ಇರಲಿಲ್ಲ. ನಾನು ಒಂದು ತೂತುಬಿದ್ದ ಪಾತ್ರೆಯಂತೆ ಆಗುತ್ತೆನೆ ಅಥವಾ ಒಬ್ಬ ಇನ್ನೊಬ್ಬನನ್ನು ಅವನು ಕಾಣದ ರೀತಿಯಲ್ಲಿ ತನ್ನನ್ನು ಅಪ್ಪಿಕೊಂಡ ಮತ್ತು ಇಬ್ಬರು ಒಂದೇ ಅಸ್ತಿತ್ವ ಹೊಂದಿದ ರೀತಿಯಲ್ಲಿರುತ್ತದೆ. ಅಷ್ಟರಲ್ಲಿ ನಾನು ನೋಡುವುದೇನೆಂದರೆ ಅಲ್ಲಾಹನ ಆತ್ಮ ನನ್ನನ್ನು ಆವರಿಸಿಕೊಂಡಿದೆ. ಮತ್ತು ನನ್ನ ಶರೀರದ ಮೇಲೆಯೂ ಆವರಿಸಿಕೊಂಡು ತನ್ನ ಅಸ್ತಿತ್ವದಲ್ಲಿ ನನಗೆ ಶರಣು ನೀಡಿರುವನು. ಎಲ್ಲಿಯವರೆಗೆಂದರೆ ನನ್ನ ಅಣುವಿನಷ್ಟು ಭಾಗ ಸಹ ಉಳಿಯಲಿಲ್ಲ, ನಾನು ನನ್ನ ಶರೀರವನ್ನು ಕಾಣುತ್ತಿದ್ದರೆ, ನನ್ನ ಅಂಗಗಳು ಅವನ ಅಂಗಗಳಾಗಿ, ನನ್ನ ಕಣ್ಣು ಅವನ ಕಣ್ಣು, ನನ್ನ ಕಿವಿ ಅವನ ಕಿವಿ, ನನ್ನ ನಾಲಿಗೆ ಅವನ ನಾಲಿಗೆಯಾಗಿ ಬಿಟ್ಟಿತ್ತು. ನನ್ನ ಪ್ರಭು ನನಗೆ ವಶಪಡಿಸಿಕೊಂಡ, ಯಾವ ರೀತಿ ವಶಪಡಿಸಿಕೊಂಡ ಎಂದರೆ ನಾನು ಸಂಪೂರ್ಣ ಅವನಲ್ಲಿ ಕಳೆದುಹೋದೆ ಮತ್ತು ನಾನು ನೋಡುತ್ತೇನೆ. ಅವನ ಶಕ್ತಿ ಅವನ ಬಲ ನನ್ನಲ್ಲಿ ಉಕ್ಕಿ ಬರುತ್ತಿದೆ. ಅವನ ಏಕತ್ವ ನನ್ನಲ್ಲಿ ಸೇರಿಕೊಂಡಿದೆ. ಅವನ ಪ್ರತಾಪದ ಪೆಂಡಾಲುಗಳು ನನ್ನ ಹೃದಯದ ಸುತ್ತಲೂ ಹಾಕಲಾಗಿದೆ ಆ ಪ್ರತಾಪಶಾಲಿಯು ನನ್ನ ಆತ್ಮವನ್ನು ಕಡಿದು ಹಾಕಿತು. ಆಗ ನಾನು ನಾನಾಗಿರಲಿಲ್ಲ. ನನ್ನ ಯಾವ ಆಸೆಯೂ ಬಾಕಿಯಾಗಿ ಉಳಿದಿರಲಿಲ್ಲ. ನನ್ನ ಸ್ವಂತದ ಕಟ್ಟಡ ಬಿದ್ದು ಹೋಗಿತ್ತು. ಆ ಸರ್ವ ಲೋಕಗಳ ಪ್ರಭುವಿನ ಕಟ್ಟಡ ಕಾಣತೊಡಗಿತು. ಮತ್ತು ಏಕದೇವತ್ವವು ನನ್ನಲ್ಲಿ ಪ್ರಬಲವಾಗಿ ಸೇರಿಕೊಂಡಿತ್ತು. ಮತ್ತು ನಾನು ಶಿರದ ಕೂದಲುಗಳಿಂದ ಹಿಡಿದು ಉಗುರಿನವರೆಗೆ ಅವನೆಡೆ ಸೆಳೆತಕ್ಕೆ ಒಳಗಾಗಿದ್ದೆ. ಆಗ ನಾನು ಸಿಪ್ಪೆಯಿಲ್ಲದ ತುಳಿದಂತಾಗಿದೆ. ಕೋಳೆಯಿಲ್ಲದ ಎಣ್ಣೆಯಂತಾದೆ. ನನ್ನಲ್ಲಿ ಮತ್ತು ನನ್ನ ಆತ್ಮದಲ್ಲಿ ಪ್ರತ್ಯೇಕತೆ ಉಂಟಾಗಿತ್ತು. ಹಾಗೆ ಆಗ ನಾನು ಕಾಣದ ವಸ್ತುವಿನಂತಾದೆ. ಅಥವಾ ಸಮುದ್ರಕ್ಕೆ ಸೇರಿದ ಹನಿಯಂತಾದೆ. ಅದು ಸಮುದ್ರಕ್ಕೆ ಸೇರಿ ತನ್ನ ಅಸ್ತಿತ್ವ ಕಳೆದುಕೊಂಡಂತೆ. ಈ ಅವಸ್ಥೆಯಲ್ಲಿ ನಾನು ಈ ಮೊದಲು ಏನಾಗಿದ್ದೆ ಎಂಬ ಅರಿವೇ ಇರಲಿಲ್ಲ. ಅವನ ಏಕತ್ವ ನನ್ನ ನರನರಗಳಲ್ಲಿ ಸೇರಿಹೋಯಿತು. ಮತ್ತು ನಾನು ಸಂಪೂರ್ಣ ರೀತಿಯಲ್ಲಿ ಅವನಲ್ಲಿ ಕಳೆದುಹೋದೆನು. ಮತ್ತು ಅಲ್ಲಾಹನು ನನ್ನ ಎಲ್ಲಾ ಅಂಗಗಳನ್ನು ತನ್ನ ಕಾರ್ಯಗಳಲ್ಲಿ ತೊಡಗಿಸಿಕೊಂಡನು ಮತ್ತು ಎಷ್ಟು ಪ್ರಬಲವಾದ ಶಕ್ತಿಯಿಂದ ನನ್ನ ಮೇಲೆ ಹಿಡಿತ ಸಾಧಿಸಿದ್ದನೆಂದರೆ ಅದಕ್ಕಿಂತ ಹೆಚ್ಚು ಊಹಿಸಲೂ ಸಾಧ್ಯವಿಲ್ಲ. ಹಾಗೆ ಅವನ ಹಿಡಿತದಲ್ಲಿ ಸಂಪೂರ್ಣವಾಗಿ ಅಂದರೆ ನನ್ನ ಅಸ್ತಿತ್ವ ಇಲ್ಲದಂತಾಗಿತ್ತು. ಆಗ ನನಗೆ ಭಾಸವಾಗುತ್ತಿದ್ದವೇನೆಂದರೆ ನನ್ನ ಅಂಗಗಳು ನನ್ನದಾಗಿರಲಿಲ್ಲ. ಬದಲು ಅಲ್ಲಾಹನ ಅಂಗಗಳಾಗಿವೆ ಮತ್ತು ನಾನು ನನ್ನ ಅಸ್ತಿತ್ವ ಕಳೆದುಕೊಂಡಿದ್ದೇನೆಂದು ಭಾಸವಾಗುತ್ತಿತ್ತು. ತಮ್ಮದೇನು ಉಳಿದಿರಲಿಲ್ಲ. ಈಗ ಯಾವ ಸಹಭಾಗಿ ಮತ್ತು ಅಡೆತಡೆ ಒಡ್ಡುವವನಿಲ್ಲ. ಅಲ್ಲಾಹನು ನನ್ನ ಅಸ್ತಿತ್ವದಲ್ಲಿ ಸೇರಿಕೊಂಡಿರುವನು. ನನ್ನ ಕೋಪ ತಾಪ ಮತ್ತು ಸಹಿಷ್ಣುತೆ, ಸಿಹಿ ಕಹಿ, ಎಲ್ಲ ಆಗು-ಹೋಗುಗಳು ಅವನದ್ದಾಗಿವೆ. **ಈ ಸ್ಥಿತಿಯಲ್ಲಿ ನಾನು ಹೀಗೆ ಹೇಳುತ್ತಿದ್ದೆ. ನಾವು ಒಂದು ಹೊಸ ಯೋಜನೆ ಮತ್ತು ಹೊಸ ಆಕಾಶ ಹಾಗೂ ಹೊಸ ಭೂಮಿ ಬಯಸುತ್ತೇನೆ.** ಅದುದರಿಂದ ನಾನು ಮೊದಲು ಭೂಮ್ಯಾಕಾಶವನ್ನು ತಾತ್ಕಾಲಿಕ ರೂಪದಲ್ಲಿ ಸೃಷ್ಟಿಸಿದೆನು. ಅದರಲ್ಲಿ ಹೆಚ್ಚಿನ ಶಿಸ್ತು ಮತ್ತು ಅಂತರಗಳಿರಲಿಲ್ಲ. ಮತ್ತೆ ನಾನು ಅಲ್ಲಾಹನ ನಿಶ್ಚಯದಂತೆ ಅದರ ರಚನೆ ಮತ್ತು ಅಂತರಗಳನ್ನು ಕಂಡೆನು. ಆಗ ನಾನು ನೋಡಿದೆ. ನಾನು ಈ ಸೃಷ್ಟಿಗೆ ಬದ್ಧನಾಗಿದ್ದೇನೆ. ಮತ್ತೆ ನಾನು ಆಕಾಶಲೋಕವನ್ನು ಸೃಷ್ಟಿಸಿದೆನು ಮತ್ತು ಹೇಳಿದೆನು. **ಇನ್ನಾ**

**ಝ್ಯೂಯನ್ನಸ್ಸಮಾಅ ದ್ದುನಿಯಾ ಬಿಮಸಾಬೀಹ.** ತದನಂತರ ನಾನು ಹೇಳಿದೆ. ಈಗ ನಾವು ಮನುಷ್ಯನನ್ನು ಮಣ್ಣಿನ ಆವೆಯಿಂದ ಸೃಷ್ಟಿಸುವೆವು. ಆಗ ನನ್ನ ಸ್ಥಿತಿ ಸ್ವಪ್ನದಿಂದ ದಿವ್ಯವಾಣಿಯೆಡೆ ಪರಿವರ್ತನೆಗೊಂಡಿತು. ಮತ್ತು ನನ್ನ ನಾಲಿಗೆಯ ಮೇಲೆ ಈ ಪದಗಳು ಜಾರಿಯಾದವು. **ಅರದ್‌ತು ಅನ್ ಅಸ್‌ತಖ್ಲಿಫ ಫಖಲಫ್‌ತು ಆದಮ– ಇನ್ನ ಖಲಖ್ನಲ್ ಇನ್‌ಸಾನ ಫೀ ಅಹ್ಸನಿ ತಖ್ವೀಮ್.**

ಈ ದಿವ್ಯವಾಣಿಗಳಾಗಿವೆ. ಅಲ್ಲಾಹನಿಂದ ನನ್ನ ಬಗ್ಗೆ ನನ್ನ ಮೇಲೆ ಪ್ರಕಟಗೊಂಡಿವೆ. ಅದೇ ರೀತಿಯ ಇನ್ನು ಹಲವು ದಿವ್ಯವಾಣಿಗಳಿವೆ. ಅವು ಸುಮಾರು 25 ವರ್ಷಗಳಿಂದ ಪ್ರಕಟಪಡಿಸುತ್ತಿದ್ದೇನೆ. ಅವುಗಳಿಂದ ಹಲವು ನನ್ನ ಗ್ರಂಥ ಬರಾಹಿನೆ ಅಹ್ಮದಿಯಾ ಮತ್ತು ಇತರ ಗ್ರಂಥಗಳಲ್ಲಿ ಮುದ್ರಿತಗೊಂಡು ಪ್ರಕಟವಾಗಿವೆ. ಈಗ ಪಾದರಿ ಸಾಹೇಬರುಗಳು ಯೋಚಿಸಲಿ ಮತ್ತು ಗಮನಹರಿಸಲಿ ಮತ್ತು ಈ ದಿವ್ಯವಾಣಿಗಳನ್ನು ಯೇಸುಮಸೀಹನ ದಿವ್ಯವಾಣಿಗಳಿಗೆ ಹೋಲಿಸಿ ನೋಡಲಿ. ಮತ್ತೆ ನ್ಯಾಯಯುತವಾಗಿ ಸಾಕ್ಷಿ ನೀಡಲಿ. ಯೇಸು ಮಸೀಹರ ಆ ದಿವ್ಯವಾಣಿಗಳನ್ನು ಅದರಿಂದ ನೀವು ಅವರ ದೇವನಾಗುವ ಸಮರ್ಥನೆ ನೀಡುತ್ತೀರಿ. ನನ್ನ ಈ ದಿವ್ಯವಾಣಿಗಳಿಂದಲೂ ಹೆಚ್ಚಾಗಿವೆಯೇ? ಒಬ್ಬರ ದೇವನಾಗುವುದಕ್ಕೆ ಇಂತಹುದೇ ದಿವ್ಯವಾಣಿಗಳು ವಚನಗಳು ಸಾಕೆಂದರೆ ಸತ್ಯವಾಗಿ ಹೇಳಿರಿ. ನನ್ನ ಈ ದಿವ್ಯವಾಣಿಗಳು ನವುಝುಬಿಲ್ಲಾಹ್ ಯೇಸುವಿನ ಪೈಕಿ ಎಷ್ಟೋ ಉತ್ತಮ ರೀತಿಯಲ್ಲಿ ನನ್ನ ದೇವತ್ವ ಸಾಬೀತಾಗಬಹುದು. ಅಲ್ಲದೆ ಎಲ್ಲದಕ್ಕಿಂತ ಮಿಗಿಲಾಗಿ ನಮ್ಮ ನೇತಾರ ಒಡೆಯ ರಸೂಲುಲ್ಲಾಹ್(ಸ) ರವರ ದೇವತ್ವ ಸಾಬೀತಾಗುತ್ತದೆ. ಏಕೆಂದರೆ ಅವರ ವಹಿಯಲ್ಲಿ ಕೇವಲ ಯಾರು ನಿನ್ನ ಬೈಅತ್ ಮಾಡುವವರು. ಅವರು ನಿನ್ನಲ್ಲಲ್ಲ ಅಲ್ಲಾಹನೊಂದಿಗೆ ಬೈಅತ್ ಮಾಡಿದಂತೆ, ಅಷ್ಟೇ ಅಲ್ಲ, ಅಲ್ಲಾಹನು ಅವರ ಕೈಯನ್ನು ತನ್ನ ಕೈ ಎಂದು, ಅವರ (ಸ) ಪ್ರತಿಯೊಂದು ಕಾರ್ಯವನ್ನು ತನ್ನ ಕಾರ್ಯ ಎಂದು ಸಾರಿದರು. **ವಮಾ ಯಂತಿಖು ಅವಿಲ್ ಹವಾ, ಇನ್ ಹುವ ಇಲ್ಲಾ ವಹಿಯುಂ ಯೂಹಾ.** ಅವರ (ಸ) ವಚನಗಳೆಲ್ಲ ತನ್ನ ವಚನಗಳೆಂದನು. ಬದಲು ಒಂದು ಜಾಗದಲ್ಲಿ ಎಲ್ಲಾ ಜನರನ್ನು ಅವರ ದಾಸರೆಂದನು. **ಖುಲ್ ಯಾಇಬಾದಿ** ಅಂದರೆ ಓ ನನ್ನ ದಾಸರೆ. ಅದರಿಂದ ಸ್ಪಷ್ಟವಿದೆ. ಈ ವಿವರ ವ್ಯಾಖ್ಯಾನಗಳಿಂದ ಈ ಪವಿತ್ರವಾದ ವಚನಗಳಿಂದ ನಮ್ಮ ನಬಿ(ಸ) ರವರ ದೇವತ್ವ ಸಾಬೀತಾಗುತ್ತದೆಯೋ ಇಂಜೀಲಿನ ವಚನಗಳಿಂದ ಯೇಸುವಿನ ದೇವತ್ವ ಖಂಡಿತವಾಗಿಯೂ ಸಾಬೀತಾಗದು. ನಬಿ (ಸ) ರವರ ಸ್ಥಾನಮಾನವಂತೂ ತುಂಬಾ ಶ್ರೇತವಾದುದಾಗಿದೆ. ಪಾದರಿ ಸಾಹೇಬರುಗಳು ತುಸು ನ್ಯಾಯಯುತವಾಗಿ ನನ್ನ ಈ ದಿವ್ಯವಾಣಿಗಳನ್ನೇ ನೋಡಲಿ ಮತ್ತು ಸ್ವಯಂ ನಿರ್ಣಯಿಸಿ ಹೇಳಲಿ. ಯೇಸುವಿನ ಅಂತಹ ವಚನಗಳಿಂದ ದೇವತ್ವ ಸಾಬೀತಾಗುವುದಿದ್ದರೆ ನನ್ನ ಈ ದಿವ್ಯವಾಣಿಗಳು ಯೇಸುವಿನ ದಿವ್ಯವಾಣಿಗಳಿಂದ ಹಲವು ಪಟ್ಟು ಹೆಚ್ಚು ದೇವತ್ವ ಸಾಬೀತುಗೊಳಿಸುವಂತಿವೆ. ಸ್ವಯಂ ಪಾದರಿ ಸಾಹೇಬರುಗಳು ಯೋಚಿಸುವುದಿಲ್ಲ ಎಂದಾದರೆ ಬೇರೆ ಸಮುದಾಯದ ಮೂರು ನಿರ್ಣಯಗಳನ್ನು ನೇಮಿಸಿ ನನ್ನ ದಿವ್ಯವಾಣಿಗಳು ಮತ್ತು ಇಂಜೀಲಿನಿಂದ ಯೇಸುವಿನ ಆ ವಚನಗಳನ್ನು ಅದರಿಂದ ದೇವತ್ವ ಭಾವಿಸುತ್ತಿದ್ದೀರಿ. ಅದನ್ನು ತೀರ್ಪುಗಾರರಿಗೆ ಒಪ್ಪಿಸಿ. ಆ ತೀರ್ಪುಗಾರರು ಪಾದರಿಗಳ ಪರವಾಗಿ ನಿರ್ಣಯ ತಿಳಿಸಿದರೆ ಮತ್ತು ಪ್ರಮಾಣ ಮಾಡಿ ಈ ಹೇಳಿಕೆ ನೀಡಿದರೆ– ಯೇಸುವಿನ ವಚನಗಳಿಂದ ಯೇಸುವಿನ ದೇವತ್ವ ಹೆಚ್ಚು ಸ್ಪಷ್ಟವಾಗಿ ಸಾಬೀತಾಗುತ್ತದೆ ಎಂದುಬಿಟ್ಟರೆ ನಾನು ದಂಡರೂಪದಲ್ಲಿ ಅವರಿಗೆ ಸಾವಿರ ರೂಪಾಯಿ ಕೊಡಬಲ್ಲೆನು. ನಾನು ತೀರ್ಪುಗಾರರಿಂದ ಬಯಸುವುದೇನೆಂದರೆ ತನ್ನ ಸಾಕ್ಷ್ಯಗಳಿಂದ ಮೊದಲು ಈ ಪ್ರಮಾಣ ಮಾಡಲಿ. ನಮಗೆ ದೇವನಾಣೆಯಿದೆ. ನಮ್ಮ ತನ್ನ ಸಾಕ್ಷ್ಯಗಳಿಗಿಂತ ಮೊದಲು ಈ ಪ್ರಮಾಣ ಮಾಡಲಿ. ನಮಗೆ ದೇವನಾಣೆಯಿದೆ. ನಮ್ಮ ಈ ನಿರ್ಣಯ ಸರಿಯಾಗಿದೆ. ಸರಿಯಿಲ್ಲ ಎಂದಾದರೆ ಅಲ್ಲಾಹನು ಒಂದು ವರ್ಷದೊಳಗೆ ನಮ್ಮ ಮೇಲೆ ಶಿಕ್ಷೆಯನ್ನು ಅವತರಿಸಲಿ. ಅದರಿಂದ ನಮಗೆ ವಿನಾಶ ಹಾಗೂ ಅಪಮಾನ ಸರ್ವನಾಶವು ಉಂಟಾಗಲಿ ಎಂದು. ನಾನು ಚೆನ್ನಾಗಿ ಬಲ್ಲೆನು. ಪಾದರಿ ಸಾಹೇಬರುಗಳು ಎಂದೂ ಈ ವಿಧಾನವನ್ನು ಸ್ವೀಕರಿಸಲಾರರು. (ಅದೇ ಪುಟ 103–106).

ನಾನು ಮತ್ತೊಮ್ಮೆ ಹೇಳುವೆನು. ನನ್ನ ಭಾಷಣದ ತಿರುಳು ಏನೆಂದರೆ ಹಝ್ರತ್ ಈಸಾ(ಅ) ರವರನ್ನು ದೇವನನ್ನಾಗಿ ಮಾಡುವವರು ಅಪ್ಪಟ ತಪ್ಪು ಹಾದಿಯಲ್ಲಿದ್ದಾರೆ. ಯಾವ ವಚನಗಳಿಂದ ಅವರು ಈ ನಿರ್ಣಯ ತೆಗೆದುಕೊಳ್ಳುತ್ತಿದ್ದಾರೆ. ಯೇಸು ದೇವನು ಅಥವಾ ದೇವನಪುತ್ರ ಆಗಿದ್ದಾನೆ. ಈ ವಚನಗಳಿಂದ ಎಷ್ಟೋ ಪಟ್ಟು ಹೆಚ್ಚು ನನ್ನ ದಿವ್ಯವಾಣಿಗಳು ಅಥವಾ ವಚನಗಳಾಗಿವೆ. ಫಾದರಿ ಸಾಹೇಬರುಗಳು ಯೋಚಿಸಲಿ, ಗಂಭೀರವಾಗಿ ಯೋಚಿಸಲಿ ಮತ್ತು ಮತ್ತೊಮ್ಮೆ ಮಗದೊಮ್ಮೆ ಯೋಚಿಸಲಿ. ಯೇಸುವನ್ನು ದೇವನನ್ನಾಗಿ ಮಾಡುವವರ ಕೈಯಲ್ಲಿ ಕೆಲವು ವಚನಗಳನ್ನು ಬಿಟ್ಟರೆ ಇನ್ನೇನಿದೆ. ಆದುದರಿಂದ ನಾನು ಬಯಸುವುದೇನೆಂದರೆ ಅವರು ನನ್ನ ದಿವ್ಯವಾಣಿ ವಚನಗಳನ್ನು ಅವರ ದಿವ್ಯವಾಣಿ ವಚನಗಳೊಡನೆ ಹೋಲಿಸಿ ನೋಡಲಿ ಮತ್ತು ನ್ಯಾಯಯುತವಾಗಿ ಸಾಕ್ಷಿ ನೀಡಲಿ. ಹಾಗೆ ಬಹಿರಂಗ ರೂಪದಲ್ಲಿ ನೋಡಿದರೆ ಒಬ್ಬ ವ್ಯಕ್ತಿಯನ್ನು ದೇವನನ್ನಾಗಿ ಮಾಡಲು ನನ್ನ ದಿವ್ಯವಾಣಿಗಳು ವಚನಗಳಷ್ಟು ಸಾಕ್ಷ್ಯವಾದಷ್ಟು ಯೇಸುವಿನ ದಿವ್ಯವಾಣಿಯ ವಚನಗಳು ಖಂಡಿತವಾಗಿಯೂ ಇಲ್ಲ. ಅಂದ ಮೇಲೆ ಯಾವ ಕಾರಣಕ್ಕಾಗಿ ಯೇಸುವನ್ನು ದೇವನನ್ನಾಗಿ ಮಾಡಲು ಹೊರಟಿದ್ದಾರೆ. ಅಂತಹುದೇ ವಚನಗಳು ಬದಲು ಅದಕ್ಕಿಂತ ಮಿಗಿಲಾದುದನ್ನು ಇನ್ನೊಬ್ಬರ ಪರವಾಗಿದ್ದರೆ ಅದಕ್ಕೆ ಬೇರೆ ಅರ್ಥ ನೀಡುವುದು ಏಕೆ. (ಅದೇ ಪುಟ 107)

ಯೇಸುವಿನ ದೃಷ್ಟಾಂತಗಳ ಬಗ್ಗೆ ನಾನು ಬರೆದುದ್ದಾಗಿದೆ. ಅವು ಈ ಕಾಲಘಟ್ಟಕ್ಕಾಗಿರುವ ದೃಷ್ಟಾಂತಗಳಲ್ಲ. ಬದಲು ಕಥೆ ಕಾದಂಬರಿಗಳೆನ್ನಬಹುದು. ನೀವು ಅದನ್ನು ಅಲ್ಲಗಳೆಯಲಾರಿರಿ. ನೀವು ಮಹನಿಯರು ನನ್ನ ಪ್ರಬಲವಾದ ಭವಿಷ್ಯವಾಣಿಗಳನ್ನು ಮತ್ತು ದೃಷ್ಟಾಂತಗಳನ್ನು ನೋಡಿರುವಿರಿ. ನಾನು ಅಷ್ಟಕ್ಕೆ ನಿಲ್ಲುವುದಿಲ್ಲ. ಬದಲು ಬಲವಾಗಿ ಹೇಳುವೆನು. ಯಾರಾದರೂ ಈಸಾಯಿ ಬಂಧುಗಳು ನನ್ನ ಸಹವಾಸದಲ್ಲಿದ್ದರೆ ಇನ್ನು ಒಂದು ವರ್ಷ ಕಳೆಯಲಿಕ್ಕಿಲ್ಲ. ಅವರು ಹಲವು ದೃಷ್ಟಾಂತ ಕಾಣಬಹುದಾಗಿದೆ. ಇಲ್ಲಿ ಅಲ್ಲಾಹನ ದೃಷ್ಟಾಂತಗಳ ಮಳೆಯೇ ಸುರಿಯುತ್ತದೆ. ಮತ್ತು ಜನರು ಮರೆತುಬಿಟ್ಟ ಆ ಪ್ರಭುವನ್ನು ಮತ್ತು ಅದರ ಜಾಗವನ್ನು ಅವನ ಸೃಷ್ಟಿಗೆ ನೀಡಿರುತ್ತಾರೆ. ಅವನು ಈ ಸಮಯ ಅಂದರೆ ಈ ಕಾಲಘಟ್ಟದಲ್ಲಿ ಈ ವಿನೀತನ ಹೃದಯದ ಮೇಲೆ ಪ್ರಕಾಶಿಸುತ್ತಾನೆ. ಅವನು ಯಾರಾದರೂ ತನ್ನೆಡೆ ನೋಡಲು ಸಿದ್ಧನಾಗಿದ್ದಾರೆಯೇ? ಎಂಬುದನ್ನು ನೋಡಬಯಸುತ್ತಾನೆ. ಓ ಪ್ರಿಯರೆ! ತಪ್ಪು ವಾದಗಳಲ್ಲಿ 'ಸಿಲುಕದಿರಿ, ಯೇಸು ಇಬ್ನು ಮರಿಯಮ್ ದೇವನಲ್ಲ. ಅವನ ಬಾಯಿಯಿಂದ ಹೊರಡಿದಂತಹ ವಚನಗಳು ದೇವಪುರುಷರ ಬಾಯಿಯಿಂದ ಹೊರಡುತ್ತವೆ. ಆದರೆ ಅವರು ದೇವನಾಗಲು ಸಾಧ್ಯವಿಲ್ಲ. ಏಳಿರಿ! ಪಶ್ಚಾತ್ತಾಪಪಡಿರಿ. ಈಗ ಸಮಯ ಬಂದಿದೆ!! ತೌರಾತ್ ಮತ್ತು ಖುರ್‌ಆನ್ ಒಮ್ಮತ ಹೊಂದಿದಂತಹ ಪ್ರಭುವನ್ನು ಆರಾಧಿಸಿರಿ. ಯೇಸು ಇಬ್ನು ಮರಿಯಮ್ ಓರ್ವ ವಿನಯವಂತ ದಾಸ ಮಾತ್ರ ಅವರನ್ನು ಅಲ್ಲಾಹನು ಕಳುಹಿಸಿದ ಪ್ರವಾದಿ ಎಂದು ನಂಬಿರಿ. ಈಗಲೂ ಕ್ರೈಸ್ತರಾದವರು ನಮಬಲಿಲ್ಲ ಎಂದಾದರೆ ಅಲ್ಲಾಹನು ನ್ಯಾಯಪೂರ್ತಿಕರಣ ಮಾಡಿರುತ್ತಾನೆ. (ಅದೇ ಪುಟ 108).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನ ಪಂಥ್ವಾನವನ್ನು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಅಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284)**

**(ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**MUSLIM TELEVISION AHMADIYYA INTERNATIONAL**
**www.mta.tv**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 03 March 2022, Issue No. 09

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 08ರ ವರದಿಯ ಉಳಿದ ಭಾಗ)**

ಅಲ್ಲಾಹನು ಉಭಯತ್ರರಿಗೂ ಆ ಭಾಗ್ಯ ದಯಪಾಲಿಸಲಿ. ಅವರು ಯಾವುದೇ ಧರ್ಮಕ್ಕೆ ಸಂಬಂಧಿಸಿದವರಾಗಲಿ, ಮುಸ್ಲಿಮರಾಗಲಿ, ಕ್ರೈಸ್ತರಾಗಲಿ, ಯಹೂದ್ಯರಾಗಲಿ, ಅಥವ ಯಾವ ಧರ್ಮದವರಾಗಲಿ, ಮಾನವೀಯ ಮೌಲ್ಯಗಳನ್ನು ಮುಂದಿರಿಸಿಕೊಂಡು ಒಬ್ಬರು ಮತ್ತೊಬ್ಬರ ಭಾವನೆಗಳನ್ನು ಗಮನಿಸಬೇಕು. ಎಂ ಪಿ. ಸಾಹೇಬರು ಸಹ ಹೇಳಿದರು. ಶಾಂತಿಯ ಸಂದೇಶ ಅತ್ಯಂತ ಮುಖ್ಯವಾಗಿದೆ ಎಂದು. ಶಾಂತಿಯ ಸಂದೇಶ ಸಾರುವವರನ್ನು ಇಲ್ಲಿ ತುಂಬು ಹೃದಯದಿಂದ ಸ್ವಾಗತಿಸಲಾಗುತ್ತದೆ. ಇದು ಕೇವಲ ಇಲ್ಲಿಯ ಮಾತಲ್ಲ. ನನ್ನ ಪ್ರಕಾರ ಲೋಕದೆಲ್ಲೆಡೆ ಇಂತಹ ವಿವೇಕಯುತ ಮನುಷ್ಯರು ಇರುವರು. ಶಾಂತಿಯ ಸಂದೇಶವನ್ನು ಪ್ರೀತಿಯ ಸಂದೇಶವನ್ನು ಅಲ್ಲಿಯೂ ಸ್ವಾಗತಿಸಲಾಗುತ್ತದೆ ಮತ್ತು ಸ್ವಾಗತಿಸಬೇಕಾಗಿದೆ. ಅಂತೂ ಈ ನಗರದ ಜನತೆಗೆ ಅಬಿನಂದನೆಗಳನ್ನು ಸಲ್ಲಿಸುತ್ತೇನೆ. ನೀವು ಸಹಿಷ್ಣುತೆ ಮತ್ತು ಶಾಂತಿಯನ್ನು ಪ್ರದರ್ಶಿಸುತ್ತಾ ಅಹ್ಮದಿಯಾ ಜಮಾಅತಿನ ಸದಸ್ಯರಿಗೆ, (ಅವರು ಪ್ರೀತಿ, ಶಾಂತಿಯ ಪ್ರಚಾರ ಮಾಡುವವರಾಗಿದ್ದಾರೆ) ತಮ್ಮ ನಗರದಲ್ಲಿ ಆರಾಧನೆಗೋಸ್ಕರ ಸ್ಥಳಾವಕಾಶ ಮಾಡಿಕೊಟ್ಟು ಅನುಮತಿ ನೀಡಿದ್ದೀರಿ.

ಹುಝೂರ್ ಅನ್ವರ್ ಹೇಳಿದರು. ಮತ್ತೆ ನಗರದ ಮೇಯರ್ ರವರು ಸಹ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದರು, ಒಂದು ಮಾತನ್ನು ಅವರು ಹೀಗೂ ಹೇಳಿದ್ದಾರೆ (ಭಾಷಾಂತರದಲ್ಲಿ ಕೇಳಿಕೊಂಡಿದ್ದೇನೆ.) ಧರ್ಮಕ್ಕೆ ಅಷ್ಟು ಮಹತ್ವವಿಲ್ಲ, ಬದಲು ಶಾಂತಿ ಮತ್ತು ಪ್ರೀತಿಯ ಪರಿಸರಕ್ಕೆ ಮಹತ್ವವಿದೆ. ಪರಸ್ಪರ ಸದ್ವರ್ತನೆಯ ಹೆಚ್ಚು ಮಹತ್ವವಿದೆ. ನಿಸ್ಸಂಶಯವಾಗಿ ನನ್ನ ದೃಷ್ಟಿಯಲ್ಲಿ ಧರ್ಮಕ್ಕೆ ಮಹತ್ವವಿದೆ. ಆದರೆ ಅದರ ಜೊತೆಯಲ್ಲಿಯೇ ಈ ಮಾತಿನಲ್ಲೂ ನನ್ನ ನಂಬಿಕೆಯಿದೆ ಮತ್ತು ಅದನ್ನೇ ನಾನು ಸದಾಕಾಲಕ್ಕೂ ಜಮಾಅತಿಗೆ ಹೇಳುತ್ತಾ ಬಂದಿದ್ದೇನೆ ಮತ್ತು ಅದೇ ಇಸ್ಲಾಮಿನ ಶಿಕ್ಷಣವು ಆಗಿದೆ. ಮಾನವೀಯ ಮೌಲ್ಯಗಳು ಎಲ್ಲದಕ್ಕಿಂತ ಮುಖ್ಯವಾಗಿವೆ. ಈ ಹಿಂದೆಯೂ ನಾನು ಹೇಳಿದ್ದೇನೆ. ಯಾವುದೇ ಒಂದು ಧರ್ಮ ಮಾನವೀಯ ಮೌಲ್ಯಗಳನ್ನು ಗಮನಿಸುವುದಿಲ್ಲವಾದರೆ, ಆ ಧರ್ಮ, ತಮ್ಮ ಧರ್ಮದ ಹಕ್ಕು ಸಹ ಪಾಲಿಸುತ್ತಿಲ್ಲ ಮತ್ತು ಇಂತಹ ಧರ್ಮ ನಿಷ್ಪ್ರಯೋಜಕವಾಗಿದೆ. ಅದು ಇತರರ ಹಕ್ಕುಗಳನ್ನು ಪಾಲಿಸುತ್ತಿಲ್ಲವಾದರೆ. ಕೆಲವು ಕಡೆ ಕೆಲ ಸಂದರ್ಭಗಳಲ್ಲಿ, ಎಂಥ ಅವಕಾಶಗಳು ಎದುರಾಗುತ್ತವೆ ಎಂದರೆ ಅಲ್ಲಿ ಮಾನವ ಹಕ್ಕುಗಳನ್ನು ಪಾಲಿಸುವುದು ಆರಾಧನೆಯಾಗಿ ಬಿಡುತ್ತದೆ. ಅದೇ ಧರ್ಮದ ಶಿಕ್ಷಣವಾಗಿದೆ. ಅದೇ ನನ್ನ ಧರ್ಮದ ಶಿಕ್ಷಣವಾಗಿದೆ. ಕೇವಲ ಮಸೀದಿಯಲ್ಲಿ ಆರಾಧನೆ ಮಾಡುವುದೇ ಧರ್ಮವಲ್ಲ, ಬದಲು ಮಾನವರ ಸೇವೆ ಮಾಡುವುದು, ಅವರ ಹಕ್ಕುಗಳನ್ನು ಪಾಲಿಸುವುದು ಸಹ ಆರಾಧನೆಯಾಗಿದೆ. ಯಾರು ಮಾನವ ಹಕ್ಕುಗಳನ್ನು ಪಾಲಿಸುವುದಿಲ್ಲ. ಕೇವಲ ಮಸೀದಿಗೆ ಬಂದು ನಮಾಝ್ ನಿರ್ವಹಿಸುವುದೇ ಆರಾಧನೆ ಎಂದು ತಿಳಿದುಕೊಂಡಿದ್ದರೆ, ಪವಿತ್ರ ಖುರ್‌ಆನ್ ಅಂತಹ ನಮಾಝ್ ಮಾಡುವವರ ಆರಾಧನೆಯನ್ನು ಸ್ವೀಕರಿಸುವುದಿಲ್ಲ. ಅಲ್ಲಾಹನು ನಮಗೆ ನೀಡಿದ ಶಿಕ್ಷಣದ ಪ್ರಕಾರ, ನೀವು ಎರಡೂ ರೀತಿ ಹಕ್ಕುಗಳನ್ನು ಪಾಲಿಸದಿದ್ದರೆ ಅಂದರೆ ತನ್ನ ಸೃಷ್ಟಿಕರ್ತನ ಹಕ್ಕು ಮತ್ತು ಅವನ ಸೃಷ್ಟಿಯ ಹಕ್ಕು ಪಾಲಿಸದಿದ್ದರೆ ನಿಮ್ಮ ಆರಾಧನೆಗಳು ನಿಷ್ಪ್ರಯೋಜಕವಾಗುವುವು. ನೀವೂ ತಮ್ಮನ್ನು ಯಾವುದೇ ಧರ್ಮಕ್ಕೆ ಸಂಬಂಧಿಸಿದ್ದಿರೆಂದು ಹೇಳಿಕೊಳ್ಳುವುದು ನಿಷ್ಪ್ರಯೋಜಕವಾಗುವುದು.

ಹುಝೂರ್ ಅನ್ವರ್ ಹೇಳಿದರು. ಹಾಗೆ ಇದೇ ಶಿಕ್ಷಣ ಅಹ್ಮದಿಯಾ ಜಮಾಅತ್ ಲೋಕದಲ್ಲೆಲ್ಲ ಪ್ರಚಾರಪಡಿಸುತ್ತಿದೆ. ಅದೇ ಕಾರಣದಿಂದ ನಾವು "ಎಲ್ಲರೊಡನೆ ಪ್ರೀತಿ ಮತ್ತು ಯಾರೊಡನೆಯೂ ದ್ವೇಶವಿಲ್ಲ" ಎಂದು ಮಾತನಾಡುತ್ತೇವೆ. ಅದೇ ಉದ್ದೇಶ ಇಟ್ಟುಕೊಂಡು ನಾವು ಮಸೀದಿಗಳ ನಿರ್ಮಾಣ ಮಾಡುತ್ತೇವೆ, ಮಸೀದಿ ನಿರ್ಮಾಣದ ನಂತರ ಅಹ್ಮದಿಯಾ ಜಮಾಅತಿನ ಪರಿಚಯ ಇನ್ನಷ್ಟು ಹೆಚ್ಚಬೇಕು. ನನಗೆ ಭರವಸೆ ಇದೆ. ಇನ್‌ಶಾಅಲ್ಲಾಹ್ ಈ ಪರಿಚಯ ಈ ಮಸೀದಿಯ ನಿರ್ಮಾಣದ ನಂತರ ಇನ್ನಷ್ಟು ವಿಸ್ತರಿಸುವುದು, ಜನರಲ್ಲಿರುವ ಆತಂಕಗಳು ಸಹ ಇನ್‌ಶಾಅಲ್ಲಾಹ್ ದೂರವಾಗುವುದು.

ಹುಝೂರ್ ಅನ್ವರ್(ಅಬಿಅ) ಹೇಳಿದರು. ಅಲ್ಲಾಹನು ನಿಮಗೆಲ್ಲರಿಗೂ ಪ್ರತಿಫಲವನ್ನು ನೀಡಲಿ, ತಾವೆಲ್ಲರೂ ತುಂಬ ಸಹಕಾರವನ್ನು ನೀಡಿದ್ದೀರಿ. ಅಲ್ಲಾಹನು ಅಹ್ಮದಿಯರಿಗೆ ಈ ಮಸೀದಿ ನಿರ್ಮಾಣ ಆದ ನಂತರ ಈ ಮಸೀದಿಯ ಹಕ್ಕನ್ನು ಪಾಲಿಸುವವರಾಗಲಿ, ಇಲ್ಲಿಯ ಜನರ ಹಕ್ಕುಗಳನ್ನು ಪಾಲಿಸುವವರಾಗಲಿ, ಮತ್ತು ಮಾನವೀಯ ಮೌಲ್ಯಗಳಿಗೆ ಸದಾ ಒತ್ತುಕೊಡುವವರಾಗಲಿ, ಆಗ ಮಾತ್ರ ಅವರ ಆರಾಧನೆಗಳು ಸ್ವೀಕಾರಗೊಳ್ಳುವುವು.

ಅಲ್ಲಾಹನು ಎಲ್ಲರಿಗೂ ಆ ಭಾಗ್ಯ ದಯಪಾಲಿಸಲಿ. ಜಝಾಕಲ್ಲಾಹ್

ಹುಝೂರ್ ಅನ್ವರ್ (ಅಬಿಅ) ರವರ ಈ ಭಾಷಣ ಎರಡು ಗಂಟೆಯವರೆಗೆ ಜಾರಿಯಲ್ಲಿತ್ತು. ಭಾಷಣದ ನಂತರ ಅವರು ಮಸೀದಿಗೆ ಅಡಿಗಲ್ಲು ಹಾಕುವ ಸ್ಥಳಕ್ಕೆ ಆಗಮಿಸಿದರು. ದುಆದೊಂದಿಗೆ ಬುನಾದಿಯ ಇಟ್ಟಿಗೆಯನ್ನು ಇಡಲಾಯಿತು. ಅನಂತರ ಅವರ ಧರ್ಮಪತ್ನಿಯೂ ಇಟ್ಟಿಗೆಯನ್ನು ಇಟ್ಟರು. ಅನಂತರ ಸರತಿಯಂತೆ ಈ ಕೆಳಗೆ ನಮೂದಿಸಿದ ಜಮಾಅತಿನ ಹುದ್ದೆದಾರರು ಮತ್ತು ಬಾಂಧವರು ಒಂದೊಂದು ಇಟ್ಟಿಗೆಯನ್ನು ಇಡುವ ಸೌಭಾಗ್ಯ ಪಡೆದರು.

1. ಮುಕರ್ರಮ್ ಅಬ್ದುಲ್ಲ ವಾಗಸ್ ಹೌಝೂರ್ ಸಾಹಿಬ್, ನ್ಯಾಶ್ನಲ್ ಅಮಿರ್ ಜರ್ಮನಿ.
2. Mr. Thomas Gemke.
3. Mr. Michael Scheffler. member of parliament
4. Mr. Machael Esken. mayor of Hamer
5. ಅಬ್ದುಲ್ ಮಾಜಿದ್ ತಾಹಿರ್.
6. ಮಾನ್ಯ ಹೈದರ್ ಅಲಿ ಝಫರ್ ಸಾಹಿಬ್. ಮಶಿನರಿ ಇಂಚಾರ್ಜ್.
7. ಮಾನ್ಯ ಮುಬಾರಕ್ ಅಹ್ಮದ್ ಝಫರ್ ಸಾಹಿಬ್.
8. ಮಾನ್ಯ ಮುನೀರ್ ಅಹ್ಮದ್ ಜಾವೀದ್ ಸಾಹಿಬ್.
9. ಮಾನ್ಯ ಸಯ್ಯದ್ ಸಲ್ಮಾನ್ ಶಾಹ್ ಸಾಹಿಬ್.
10. ಮಾನ್ಯ ಚೌಧರಿ ಇಫ್ತಿಖಾರ್ ಅಹ್ಮದ್ ಸಾಹಿಬ್.
11. ಮಾನ್ಯ ಹಸನಾತ್ ಅಹ್ಮದ್ ಸಾಹಿಬ್. ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಜರ್ಮನಿ.
12. ಮಾನ್ಯ ಅಮತುಲ್ ಹೈ ಸಾಹಿಬ. ಸದರ್ ಲಜನ ಇಮಾಇಲ್ಲಾಹ್ ಜರ್ಮನಿ.
13. ಮಾನ್ಯ ಹಿದಾಯತುಲ್ಲಾಹ್ ಶಾದ್ ಸಾಹಿಬ್.
14. ಮಾನ್ಯ ಚೌಧರಿ ಅಝ್ಮತ್ ಅಲಿ ಸಾಹಿಬ್ ರೀಜನಲ್ ಅಮೀರ್.
15. ಮಾನ್ಯ ರೌಫ್ ಅಹ್ಮದ್ ಸಾಹಿಬ್.
16. ಮಾನ್ಯ ತಾಹಿರ್ ಮಹ್ಮೂದ್ ಸಾಹಬ್.
17. ಮಾನ್ಯ ಅಬ್ದುಲ್ ಮಾಲಿಕ್ ಸಾಹಿಬ್.
18. ಮಾನ್ಯ ಮುಹಮ್ಮದ್ ಸಾದಿಖ್ ನಾಸಿರ್ ಸಾಹಿಬ್.
19. ಮಾನ್ಯ ಬಶಾರತ್ ಮಹ್ಮೂದ್ ಸಾಹಿಬ್. ಖಾಯಿದ್ ಮಜ್ಲಿಸ್ ಈಝಾಲ್ಯೂನ್
20. ಮಾನ್ಯ ಬಶೀರ್ ಬೇಗಮ್ ಸಾಹಿಬ.

* ಅಡಿಗಲ್ಲು ಸಮಾರಂಭದ ಕೊನೆಯಲ್ಲಿ ಹುಝೂರ್ ಅನ್ವರ್ (ಅಬಿಅ) ದುಆ ಮಾಡಿಸಿದ ನಂತರ ಬಾಲಕಿಯರ ಮಾರ್ಕಿನ ಕಡೆಗೆ ತೆರಳಿದರು. ಅಲ್ಲಿ ಬಾಲಕಿಯರು ಪ್ರಾರ್ಥನಾ ಗೀತೆಗಳನ್ನು ಪ್ರಸ್ತುತಪಡಿಸಿದರು. ನಂತರ ಪ್ರೀತಿಯಿಂದ ಬಾಲಕಿಯರಿಗೆ ಚಾಕ್ಲೇಟ್‌ಗಳನ್ನು ನೀಡಿದರು.

**(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.